ರೂ. 20/-

ಡಿಸೆಂಬರ್ 2022ರ ಸಂಚಿಕೆ

# ಕನ್ನಡ ಲಿಬರೇಶನ್

ಸಿಪಿಐ (ಎಂಎಲ್) ಲಿಬರೇಶನ್ ಮುಖವಾಣಿ



## ರಷ್ಯಾದ ನವೆಂಬರ್ ಕ್ರಾಂತಿ

## ಲೆನಿನ್ ಅವರ ದಾರಿಯಲ್ಲಿ ನಡಿಯೋಣ, ಕ್ರಾಂತಿಗಾಗಿ ಶ್ರಮಿಸೋಣ!

ಸ್ವಾತಂತ್ರ್ಯ • ಸಮಾನತೆ • ಐಕ್ಯತೆ

# 11ನೇ ಮಹಾಧಿವೇಶನ

# ಸಿಪಿಐ(ಎಂಎಲ್)

ಪಾಟ್ನಾ , ಬಿಹಾರ್ • ಫೆಬ್ರವರಿ 15-20, 2023

ಕನ್ನಡ ಲಿಬರೇಶನ್
ಡಿಸೆಂಬರ್ 2022ರ ಸಂಚಿಕೆ

ಪರಿವಿಡಿ

ಸಂಘ ಪರಿವಾರದ "ಹಿಂದಿ-ಹಿಂದೂ-ಹಿಂದುಸ್ತಾನ್" ವಿರೋಧಿಸಿ 3

ಕರ್ನಾಟಕದಲ್ಲಿ ಮಠ ಮಾನ್ಯಗಳ ರಾಜಕೀಯ ಅರ್ಥ ಶಾಸ್ತ್ರ 4

ಟ್ಯುಟೋರಿಯಲ್ ಎಂಬ ದಂಧೆಯನ್ನ ನಿಗ್ರಹಿಸಬೇಕು 5

ಜೇನು ಕುರುಬ ಸಮುದಾಯದ ಶ್ರೀ । ಕರಿಯಪ್ಪ ಅವರ ಬಂಧನದಲ್ಲಿ ಮರಣ 5

ಇರಾನ್‌ನ ಮಹಿಳೆಯರ ಹೋರಾಟಕ್ಕೆ ಜಯವಾಗಲಿ 6

ಬಳ್ಳಾರಿ ಗಣಿ ಕಾರ್ಮಿಕರ ನ್ಯಾಯಕ್ಕಾಗಿ ಹೋರಾಟ 8

ಕಾರ್ಮಿಕ ವರ್ಗದ ಮೇಲೆ ಫ್ಯಾಸಿಸ್ಟ್ ದಾಳಿ 11

ಭಾರತ್ ಜೋಡೋ - ಅನಿವಾರ್ಯತೆಯೂ ಆದ್ಯತೆಗಳೂ 15

ಅಡವಿ ತಾಯಿ 17

ಬೆಂಗಳೂರಿನ ಮಳೆ ಮತ್ತು ಕಾರ್ಮಿಕರು ಅನುಭವಿಸಿದ ಸಮಸ್ಯೆಗಳು 18

ನಮ್ಮ ಕಾರ್ಯಕ್ರಮಗಳು 20

ಮುಖಪುಟ ಚಿತ್ರ: ಎನ್ಸೈಕ್ಲೋಪೀಡಿಯಾ ಬ್ರಿಟ್ಟನಿಕಾ

ಸಂಪಾದಕೀಯ ಮಂಡಳಿ
ಕ್ಲಿಫ್ಟನ್ ಡಿ' ರೋಜಾರಿಯೋ
ಡಾ । ವಿ. ಲಕ್ಷ್ಮಿ ನಾರಾಯಣ
ನಾ. ದಿವಾಕರ್
ರತಿ ರಾವ್
ಪಿ.ಆರ್.ಎಸ್ ಮಣಿ
ಲೇಖಾ ಅಡವಿ

ಸಂಪಾದಕೀಯ ಇ-ಮೇಲ್:
kannadaliberation@gmail.com

# ಸಂಘ ಪರಿವಾರದ "ಹಿಂದಿ-ಹಿಂದೂ-ಹಿಂದುಸ್ತಾನ್" ವಿರೋಧಿಸಿ

ಸಂಘ ಪರಿವಾರವು ಪಟ್ಟುಬಿಡದೆ ಅನುಸರಿಸುತ್ತಿರುವ "ಹಿಂದಿ-ಹಿಂದೂ-ಹಿಂದುಸ್ತಾನ್" ಪದಗಳು ಪ್ರಸ್ತುತ ಅತಿಮುಖ್ಯವಾದ ಅಂಶಗಳಾಗಿದ್ದಾವೆ. ಸತತವಾಗಿ ಎರಡು ಅವಧಿಯಿಂದ ಅಧಿಕಾರದಲ್ಲಿ ಹಿಡಿತ ಸಾಧಿಸಿರುವ ಮತ್ತು ಸಂಘಪರಿವಾರದ ಆಶ್ರಯದಲ್ಲಿರುವ ಬಿಜೆಪಿ ಸರ್ಕಾರವು ತನ್ನ ಎರಡನೇಯ ಅವಧಿಯಲ್ಲಿ ಎಲ್ಲಾ ರಾಷ್ಟ್ರೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ರದ್ದತಿಯ ರೂಪದಲ್ಲಿ ದಮನ ಮಾಡುವ ಉದ್ದೇಶದಿಂದ ಅನುಚ್ಛೇಧ 370, ಸಿಎಎ, ಇತ್ಯಾದಿಗಳ ಮೂಲಕ ಸಂವಿಧಾನದ ಮೇಲೆ ಸಂಪೂರ್ಣ ಆಕ್ರಮಣವನ್ನು ಪ್ರಾರಂಭಿಸಿದೆ. ಇನ್ನೊಂದು ಪ್ರಮುಖ ಅಂಶವೆಂದರೆ ಪ್ರಜ್ಞಾಪೂರ್ವಕವಾಗಿಯೇ ಎಲ್ಲಾ ಭಾಷೆಗಳಿಗೆ ಸಮಾನ ಸ್ಥಾನಮಾನ ನಿರಾಕರಣೆ ಮಾಡುತ್ತಿರುವುದು ಮತ್ತು ಹಿಂದಿಯೇತರ ಜನರ ಮೇಲೆ ಹಿಂದಿ ಹೇರಿಕೆ ಮಾಡುತ್ತಿರುವುದು.

ಒಕ್ಕೂಟ ಸರ್ಕಾರದ ಗೃಹ ಸಚಿವ ಅಮಿತ್ ಶಾ ನೇತೃತ್ವದ ಅಧಿಕೃತ ಭಾಷೆ ಸಮಿತಿಯು ಅಧ್ಯಕ್ಷರಾದ ದ್ರೌಪದಿ ಮುರ್ಮು ಅವರಿಗೆ ಸೆಪ್ಟೆಂಬರ್ 9, 2022 ರಂದು ಸಲ್ಲಿಸಿದ ವರದಿಯಲ್ಲಿ, ಐಐಟಿಗಳು, ಐಐಎಂಗಳು ಮತ್ತು ಹಿಂದಿ ಮಾತನಾಡುವ ರಾಜ್ಯಗಳಲ್ಲಿರುವ ಕೇಂದ್ರೀಯ ವಿಶ್ವವಿದ್ಯಾನಿಲಯಗಳಲ್ಲಿ ಹಿಂದಿಯನ್ನು ಬೋಧನಾ ಮಾಧ್ಯಮವಾಗಿಸಬೇಕು ಮತ್ತು ಆಡಳಿತದಲ್ಲಿ ಸಂವಹನಕ್ಕಾಗಿ ಬಳಸುವ ಭಾಷೆ ಹಿಂದಿ ಆಗಿರಬೇಕೆಂಬುದು ಸೇರಿದಂತೆ ಸುಮಾರು 100 ಶಿಫಾರಸುಗಳನ್ನು ಮಾಡಿದೆ. ಶಿಫಾರಸುಗಳ ಕೇಂದ್ರ ವಿಷಯವೆಂದರೆ ಹಿಂದಿಯನ್ನು ಅಧಿಕೃತ ಭಾಷೆಯನ್ನಾಗಿ ಮಾಡಿಕೊಂಡಲ್ಲಿ, ಸರ್ಕಾರಿ ಉದ್ಯೋಗ ಪಡೆದುಕೊಳ್ಳಲು ಅನಿವಾರ್ಯವಾಗಿ ಹಿಂದಿಯನ್ನು ಕಲಿಯುವುದು ಕಡ್ಡಾಯವಾಗಲಿದೆ ಎನ್ನುವುದೇ ಇದರ ಒಳಮರ್ಮ.

ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಹಿಂದಿ ಹೇರಿಕೆ ಹಲವಾರು ರೂಪಗಳನ್ನು ಪಡೆದುಕೊಂಡಿದೆ ಎಂಬುದನ್ನು ನೆನಪಿಸಿಕೊಳ್ಳೋಣ. 2014 ರಲ್ಲಿ, ಮೋದಿ ಸರ್ಕಾರದ ಮೊದಲ ಕ್ರಮವೆಂದರೆ ಎಲ್ಲಾ ಕೇಂದ್ರ ಸಚಿವಾಲಯಗಳು, ಇಲಾಖೆಗಳು, ನಿಗಮಗಳು, ಬ್ಯಾಂಕ್‌ಗಳು ಇತ್ಯಾದಿಗಳ ಅಧಿಕಾರಿಗಳಿಗೆ ತನ್ನ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಹಿಂದಿಗೆ ಆದ್ಯತೆ ನೀಡುವಂತೆ ಸೂಚನೆ ನೀಡಿರುವುದು. ಇತ್ತೀಚೆಗೆ ತ್ರಿಭಾಷೆ ಸೂತ್ರದ ಅನುಸಾರ ಹಿಂದಿಯನ್ನು ಹೊಸ ಶಿಕ್ಷಣ ನೀತಿಯ ಮೂಲಕ ಹೇರಲು ಪ್ರಯತ್ನಿಸಲಾಗಿದೆ.

ಸಂವಿಧಾನದ ಎಂಟನೇ ಶೆಡ್ಯೂಲ್ 22 ಭಾಷೆಗಳನ್ನು ರಾಷ್ಟ್ರೀಯ ಭಾಷೆಗಳೆಂದು ಗುರುತಿಸುತ್ತದೆ; ಆದರೆ ಇಂಗ್ಲಿಷ್ ಮತ್ತು ಹಿಂದಿ ಎರಡೂ ಸಹ ಅಧಿಕೃತ ಭಾಷೆಗಳಂತೆ ಸಮಾನ ಸ್ಥಾನಮಾನವನ್ನು ಹೊಂದಿವೆ. ಅಧಿಕೃತ ಸಂವಹನಕ್ಕಾಗಿ ಹಿಂದಿಯನ್ನು ಏಕೈಕ ಮತ್ತು ವಾಸ್ತವಿಕ ಭಾಷೆಯನ್ನಾಗಿ ಮಾಡಲು ಪ್ರಯತ್ನಿಸುವುದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ.

ಹಿಂದಿಯೇತರ ಭಾಷಿಕರ ಗಂಟಲಿಗೆ ಹಿಂದಿಯನ್ನು ಬಲವಂತವಾಗಿ ತುಂಬುವುದು ತಾರತಮ್ಯವನ್ನು ಉತ್ತೇಜಿಸುತ್ತದೆ ವಿನಃ, ಏಕತೆಯನ್ನು ಅಲ್ಲ. ಹಲವು ವರ್ಷಗಳ ಹಿಂದೆ (1919 ರಲ್ಲಿ) ರಷ್ಯಾದಲ್ಲಿ ಕಡ್ಡಾಯ ಅಧಿಕೃತ ಭಾಷೆಯ ಹೇರಿಕೆಯ ವಿರುದ್ಧ ಲೆನಿನ್ ಒಂದು ಲೇಖನವನ್ನು ಬರೆದು, ಭಾಷೆ ಹೇರಿಕೆಯಲ್ಲಿ "ದಬ್ಬಾಳಿಕೆಯ ಆಡಳಿತ" ವಿರುತ್ತದೆ ಎಂದು ಹೇಳಿದರು, ಅಲ್ಲದೆ "ಎಲ್ಲಾ ಶಾಲೆಗಳಲ್ಲಿ, ಅವುಗಳಿರುವ ಸ್ಥಳೀಯ ಭಾಷೆಗಳಲ್ಲಿ ಬೋಧನೆ ಮಾಡಬೇಕೆಂದು ವಾದಿಸಿದರು". ಇಡೀ ದೇಶದ ಮೇಲೆ ಸಂಸ್ಕೃತಕರಣಗೊಂಡಿರುವ ಹಿಂದಿಯನ್ನು ಹೇರುವ ಸಂಘ ಪರಿವಾರದ ವ್ಯಾಮೋಹದ ಹಿಂದಿನ ಪ್ರೇರಕ ಶಕ್ತಿಯೆಂದರೆ "ದಬ್ಬಾಳಿಕೆ ಆಡಳಿತ". ಹಿಂದಿ ಪ್ರಾಬಲ್ಯ ಮತ್ತು ಹಿಂದಿ ಹೇರಿಕೆಯ ವಿರುದ್ಧ

ಮುಂದುವರೆಸಿದೆ...

ಸಮಾಜದ ಹಲವಾರು ವಿಭಾಗಗಳು ಮತ್ತು ವಿಶೇಷವಾಗಿ ದಕ್ಷಿಣ ಭಾರತದ ರಾಜ್ಯಗಳು ಮತ್ತು ವಿರೋಧ ಪಕ್ಷಗಳು ಉಗ್ರವಾಗಿ ಹೋರಾಡುತ್ತಿವೆ.

ಆದಾಗ್ಯೂ, ಹಿಂದಿಯ ಹೇರಿಕೆಯು ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಅಥವಾ ಕರ್ನಾಟಕಕ್ಕೆ ಮಾತ್ರವಲ್ಲದೆ ಮಧ್ಯ ಮತ್ತು ಉತ್ತರ ಭಾರತದಲ್ಲಿ ತಮ್ಮದೇ ಆದ ಉಪಭಾಷೆಗಳನ್ನು ಹೊಂದಿರುವ ಹೆಚ್ಚಿನ ಸಮುದಾಯಗಳಿಗೆ, ವಿಶೇಷವಾಗಿ ಆದಿವಾಸಿಗಳಿಗೆ ಮತ್ತು ಯಾರಿಗೆ ಹಿಂದಿ ಭಾಷೆಯು ಇಂಗ್ಲಿಷನಷ್ಟು ಪರಕೀಯವಾಗಿದೆಯೋ ಅವರಿಗೆ ಕಳವಳವನ್ನುಂಟು ಮಾಡಿದೆ.

ಹಿಂದಿ ಹೇರಿಕೆಯ ವಿರುದ್ಧದ ಹೋರಾಟವು ವಲಸೆ ಕಾರ್ಮಿಕರ ಬಗ್ಗೆ ಗೌರವವನ್ನು ಹೊಂದಿರಬೇಕು ಮತ್ತು ಪ್ರತಿ ಮಗು ತನ್ನ ಸ್ವಂತ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿದೆ ಎಂಬುದನ್ನು ಪ್ರತಿಪಾದಿಸಬೇಕು.

ಇಂತಹ ಹೋರಾಟಗಳು ಭಾಷೆ, ಸಂಸ್ಕೃತಿ, ನಂಬಿಕೆ, ಆಹಾರ ಪದ್ಧತಿಯ ವೈವಿಧ್ಯತೆಯನ್ನು ಅಳವಡಿಸಿಕೊಳ್ಳಬೇಕು ಮತ್ತು ಸಂಘಪರಿವಾರದ "ಹಿಂದಿ-ಹಿಂದೂ-ಹಿಂದುಸ್ತಾನ್" ಎಂಬ ಫ್ಯಾಸಿಸ್ಟ್ ಯೋಜನೆಯನ್ನು ವಿರೋಧಿಸಬೇಕು. ★

# ಕರ್ನಾಟಕದಲ್ಲಿ ಮಠ ಮಾನ್ಯಗಳ ರಾಜಕೀಯ ಅರ್ಥ ಶಾಸ್ತ್ರ

ಚಿತ್ರದುರ್ಗದ ಲಿಂಗಾಯತ ಮಠದಲ್ಲಿನ ಲೈಂಗಿಕ ಶೋಷಣೆಯ ಹಿನ್ನಲೆಯಲ್ಲಿ ಅನೇಕ ಮೂಲಭೂತ ವಿಷಯಗಳನ್ನು ನಾವು ಚರ್ಚಿಸ ಬೇಕಾಗುತ್ತದೆ. ಇಂದು ಮಠಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿ ಉಳಿದಿಲ್ಲ. ಕಾಲಾಂತರದಲ್ಲಿ ಎಲ್ಲಾ ಜಾತಿಯ ಮಠಗಳು ಆರ್ಥಿಕ ಮತ್ತು ರಾಜಕೀಯ ಕೇಂದ್ರಗಳಾಗಿ ಬೆಳವಣಿಗೆ ಆಗಿವೆ.

ಇಂದು ಧರ್ಮ ಮತ್ತು ರಾಜಕಾರಣಕ್ಕೆ ಪವಿತ್ರತೆ ಇಲ್ಲ. ಅವು ಒಂದಕ್ಕೊಂದು ಹೆಣೆದುಕೊಂಡಿವೆ. ಕರ್ನಾಟಕದ ಮಟ್ಟಿಗೆ ಈ ಬದಲಾವಣೆ ಆಗಿ ಬಹಳ ಕಾಲವಾಗಿದೆ. ಅಲ್ಲಲ್ಲಿ ನಿಡುಮಾಡಿ ಮಠದವರು ಮಠಗಳನ್ನು ಸರ್ಕಾರದ ಹತೋಟಿಗೆ ತರಬೇಕೆಂದು ಹೇಳಿದ್ದೂ ಇದೆ.

ಪ್ರಾರಂಭದಲ್ಲಿ ಮಠಗಳು ಕುಟೀರದ ರೂಪದಲ್ಲಿ ಇರುತ್ತಿದ್ದವು. ಉದಾಹರಣೆಗೆ ಬುದ್ಧ ಮಾರ್ಗದ ವಿಹಾರ, ಸಂಘಗಳು ಇರುತ್ತಿದ್ದವು. 14ನೇ ಶತಮಾನದ ಹೊತ್ತಿನಲ್ಲಿಯೇ ಅದ್ವೈತ ಮಠಗಳಾದ ಪುರಿ,ಶೃಂಗೇರಿ, ಬದರಿ, ದ್ವಾರಕಾ ಮಠಗಳು ಅಸ್ತಿತ್ವದಲ್ಲಿದ್ದವು. ದ್ವೈತ ಸಂಪ್ರದಾಯದ ಉಡುಪಿ, ಉತ್ತರಾದಿ,ಮಂತ್ರಾಲಯ ಇತ್ಯಾದಿ ಮಠಗಳು ಇವೆ.

ಇಡೀ ಭಾರತ ದೇಶದಲ್ಲಿ ಕರ್ನಾಟಕದ ವಿಶಿಷ್ಟತೆ ಏನೆಂದರೆ ಇಲ್ಲಿನ ರಂಭಾ, ಬಾಳೆಹೊನ್ನೂರು, ಉಜ್ಜನಿ, ಸುತ್ತೂರು ಇತ್ಯಾದಿ ಮಠಗಳು ಸಾಕಷ್ಟು ಆಸ್ತಿ ಹೊಂದಿದ್ದು ರಾಜಕೀಯವಾಗಿ ಪ್ರಬಲವಾಗಿವೆ. ಇವುಗಳಿಗೆ ಅನೇಕ ಶಾಕಾ ಮಠಗಳು ಇವೆ. ಇವರುಗಳ ಪ್ರಭಾವ ಗ್ರಾಮ ಗ್ರಾಮದ ಮಟ್ಟಕ್ಕೆ ಇದೆ. ವೋಟ್ ಹಾಕಿಸುವುದರಲ್ಲಿ ಇವುಗಳ ಪಾತ್ರ ಇದೆ.

ಕರ್ನಾಟಕದ ಮಠಮಾನ್ಯಗಳ ರಾಜಕೀಯ ಹತೋಟಿ ಹೇಗೆ ಬೆಳೆಯುತ್ತಾ ಬಂತು ಎಂದು ತಿಳಿಯ ಬೇಕಾದರೆ ಇವುಗಳ ಕಾರ್ಯಕ್ಷೇತ್ರ ಗಮನಿಸ ಬೇಕು. ವಾಸ್ತವವಾಗಿ ನಮ್ಮ ದೇಶದಲ್ಲಿ ಬಹಳ ಬಲಹೀನವಾಗಿರುವುದು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳು. ಇದರಲ್ಲಿ ಈ ಮಠ ಮಾನ್ಯಗಳ ತ್ರಿವಿಧ ದಾಸೋಹದ ಹೆಸರಿನಲ್ಲಿ ಕೆಲಸ ಮಾಡುತ್ತಿವೆ. ಅಂದರೆ ಆಹಾರ, ಆರೋಗ್ಯ ಮತ್ತು ಶಿಕ್ಷಣದ ಹೆಸರಿನಲ್ಲಿ ವ್ಯಾಪಾರೀಕರಣ ದೊಡ್ಡ ಮಟ್ಟದಲ್ಲಿಯೇ ನಡೆಯುತ್ತಿವೆ. ಕರ್ನಾಟದಲ್ಲಿ ಎಲ್ಲಾ ಮುಖ್ಯ ಜಾತಿಗಳಿಗೊಂದು ಮಠ ಇದೆ. ಇವುಗಳು ರಾಜಕೀಯ ಪ್ರಾತಿನಿಧ್ಯ ಮತ್ತು ಮೀಸಲಾತಿ ರಾಜಕೀಯದಲ್ಲಿ ನಿರ್ಣಯ ಮಾಡುತ್ತಿವೆ.

1980ರಲ್ಲಿಯೆ ವೇದಿಕೆಯ ಮೇಲೆ ಮಠಾಧಿಪತಿಗಳು ಓಲೈಸುವ ಪರಂಪರೆ ಪ್ರಾರಂಭವಾಯಿತು. ಆಗ ಮಠಗಳಿಗೆ ಕಾಲೇಜುಗಳನ್ನು ಮಂಜೂರು ಮಾಡುವ ಪರಂಪರೆ ಹುಟ್ಟು ಹಾಕಿದವರು ರಾಮ ಕೃಷ್ಣ ಹೆಗ್ಗಡೆಯವರು. ಈ ಪ್ರವೃತ್ತಿ ಮುಂದುವರಿಯುತ್ತಾ ಬಂತು.

2019ರಲ್ಲಿ ಕುಮಾರಸ್ವಾಮಿ ಸರ್ಕಾರ ಪತನದ ಹೊತ್ತಿಗೆ ಒಕ್ಕಲಿಗ ಮಠಾಧಿಪತಿಗಳು ಆಕ್ರೋಶ ವ್ಯಕ್ತಪಡಿಸಿದ್ದರೂ. ಜಾತಿ ಆಧಾರಿತ ಮೀಸಲಾತಿಯ ಬೇಡಿಕೆಯ ಮುಂಚೂಣಿಯಲ್ಲಿ ಮಠಾಧಿಪತಿಗಳು ಇದ್ದಾರೆ.

ಬಿಜೆಪಿಯ ಆಡಳಿತದಲ್ಲಿ ಗುಣಾತ್ಮಕ ಬದಲಾವಣೆಗಳು ಏನೆಂದರೆ, ಅದು ಕೇವಲ ಹಿಂದೂ ಧರ್ಮವನ್ನೂ ಕೇಸರೀಕರಣಗೊಳಿಸುವುದು ಅಷ್ಟೇ ಅಲ್ಲ ಜಾತಿ, ಉಪಜಾತಿಗಳನ್ನು ಕೇಸರೀಕರಣ ಮಾಡುತ್ತಿದೆ.

ಯಡ್ಯೂರಪ್ಪ ನವರ ರಾಜಕೀಯ ತಳಹದಿಯ ವಿಸ್ತಾರ ಬಹಳ ಗಮನಾರ್ಹ. 2008ರಲ್ಲಿ ಬಜೆಟ್ನಲ್ಲಿ ಅನುದಾನ ನೀಡುವ ಪ್ರಕ್ರಿಯೆ ಪ್ರಾರಂಭವಾಯಿತು. 268 ದೇವಾಲಯಗಳಿಗೆ ರೂ. 110 ಕೋಟಿ ನೀಡಲಾಯಿತು. ನಂತರದಲ್ಲಿ ಸಿದ್ದರಾಮಯ್ಯ ನವರ ಸರ್ಕಾರವು ಮಠಗಳ ಮೇಲೆ ಹತೋಟಿ ಹೊಂದುವ ಅವಕಾಶ ನೀಡುವ ಒಂದು ಮಸೂದೆಯನ್ನು ಮಂಡಿಸಿತು.

ಅದನ್ನು ರದ್ದುಗೊಳಿಸಲು ಕಾಂಗ್ರೆಸ್ ನ ಹೈ ಕಮಾಂಡ್ ಮಧ್ಯ ಪ್ರವೇಶಿಸಿತು. ಒಟ್ಟಾರೆ ಆಗಿರುವುದು ಮಠ ಮಾನ್ಯಗಳು ಕೇವಲ ಧರ್ಮ ಕೇಂದ್ರಗಳಲ್ಲ, ಬದಲಾಗಿ ಇಂದು ಕಾರ್ಪೊರೇಟ್ ಆಗಿ ಪರಿವರ್ತಿತವಾಗಿವೆ. ಆಗಾಧ ಸಂಪತ್ತು ಮತ್ತು ರಾಜಕೀಯ ಶಕ್ತಿ ಹೊಂದಿ ಇಲ್ಲಿನ ರಾಜಕೀಯವನ್ನು ನಿಯಂತ್ರಿಸುತ್ತಿವೆ. ಸದಾನಂದ ಗೌಡ ಅದನ್ನೇ ಮುಂದುವರಿಸಿದರು. 2022ರಲ್ಲು 142 ಕೋಟಿ ನೀಡಲಾಗಿದೆ. ಮಠ ಮಾನ್ಯ ಓಲೈಕೆ ಎಲ್ಲಾ ಬೂರ್ಜ್ವಾ ಪಕ್ಷಗಳು ಮಾಡುತ್ತಿವೆ. ತ್ರಿವಿಧ ದಾಸೋಹದ ಹೆಸರಿನಲ್ಲಿ ಬಹುಪಾಲು ಮಠಗಳು ಶಾಲೆ ಮತ್ತು ವಸತಿ ನಿಲಯಗಳನ್ನು ನಡೆಸುತ್ತಿವೆ. ಚಿತ್ರದುರ್ಗದಲ್ಲಿ ಆಗಿರುವುದು ವಸತಿ ನಿಲಯಗಳ ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ಶೋಷಣೆ, ಕೇವಲ ಒಂದು ಸಣ್ಣ ಉದಾಹರಣೆ ಅಷ್ಟೆ.

ಹಾಗಾದರೆ ಏನು ಆಗಬೇಕು? ಎಲ್ಲಾ ಮಠ ಮಾನ್ಯಗಳ ಆಸ್ತಿ, ಸಂಪತ್ತು, ಶಿಕ್ಷಣ ಸಂಸ್ಥೆಗಳೆಲ್ಲವನ್ನೂ ರಾಷ್ಟ್ರೀಕರಣಗೊಳಿಸಬೇಕು. ಈ ಬಗ್ಗೆ ನಾವು ಇನ್ನೂ ಆಳಕ್ಕೆ ಹೋಗಿ ಗಮಿಸಬೇಕಾದದ್ದು, ಈ ಕಾರ್ಪೊರೇಟ್ ಬಂಡವಾಳದ ರೂಪ ಏನು? ಇದೂ ಕ್ರೋನೀ ಬಂಡವಾಳಶಾಹಿಯ ಭಾಗವೇ ಎಂಬುದಾಗಿದೆ. ಮುರುಘಾ ಮಠದ ಹಗರಣದ ಸಂದರ್ಭದಲ್ಲಿ ವಿವಿಧ ರಾಜಕೀಯ ವಿವಿದ ರಾಜಕೀಯ ಪಕ್ಷಗಳ ಹಿಂಜರಿತದ ಪ್ರತಿಕ್ರಿಯೆ ಗಮನಿಸಿದರೆ ಬಹುಪಾಲು ಪಕ್ಷಗಳಿಗೆ ಗಟ್ಟಿ ನಿಲುವು ತೆಗೆದು ಕೊಳ್ಳಲು ವಿಫಲವಾಗಿರುವುದು ಸತ್ಯ.

ಈ ಬಗ್ಗೆ ವ್ಯವಸ್ಥಿತ ಅಧ್ಯಯನದ ಅವಶ್ಯಕತೆ ಇದೆ.

★ ಡಾ । ವಿ. ಲಕ್ಷ್ಮಿ ನಾರಾಯಣ

# ಟ್ಯುಟೋರಿಯಲ್ ಎಂಬ ದಂಧೆಯನ್ನು ನಿಗ್ರಹಿಸಬೇಕು

ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಇತ್ತೀಚಿಗೆ ಕೋಚಿಂಗ್ ಕೇಂದ್ರದ ಒಬ್ಬ ವ್ಯಕ್ತಿ ಹತ್ತು ವರ್ಷದ ಹೆಣ್ಣು ಮಗುವಿನ ಅತ್ಯಾಚಾರ ಮತ್ತು ಕೊಲೆ ಮಾಡಿದ ಘಟನೆ ಕರ್ನಾಟಕವನ್ನು ದಿಗ್ಭ್ರಮೆ ಗೊಳಿಸಿದೆ. ಜನ ಪರ ಸಂಘಟನೆಗಳು ತಕ್ಷಣ ಪ್ರತಿಭಟನೆ ಮಾಡಿ ತಮ್ಮ ಆಕ್ರೋಶವನ್ನು ಪ್ರಕಟಿಸಿದ್ದಾರೆ.

ಕರ್ನಾಟಕ ಸರ್ಕಾರವು ಸಂತ್ರಸ್ತ ಕುಟುಂಬಕ್ಕೆ ಹಣದ ಪರಿಹಾರ ಘೋಷಿಸಿದೆ. ಇಂದು ಈ ಘಟನೆಯನ್ನು POCSO ಪ್ರಕರಣದ ಹಿನ್ನಲೆಯಲ್ಲಿ ನೋಡಬೇಕಾಗುತ್ತದೆ.

ಇಲ್ಲಿಯ ಸಂತ್ರಸ್ತರು ಸಾಮಾನ್ಯ ಪ್ರಜೆಗಳ ಹೆಣ್ಣು ಮಕ್ಕಳು ಆಗಿದ್ದಾರೆ. ಇದರ ಆರ್ಥಿಕ ಸಾಮಾಜಿಕ ಪರಿಸ್ಥಿತಿಯನ್ನು ಗಮನಿಸುವುದಾದರೆ ಮಕ್ಕಳ ವಿದ್ಯಾಭ್ಯಾಸದ ವ್ಯವಸ್ಥೆಯ ಕೊರತೆಗಳೆ ಮೂಲ ಕಾರಣವಾಗಿವೆ.

ಸರ್ಕಾರಿ ಶಾಲೆಗಳ ಹೀನಾಯ ಪರಿಸ್ಥಿತಿಯಿಂದಾಗಿ ಖಾಸಗೀ ಕೋಚಿಂಗ್ ಬೆಳೆದಿವೆ. ಇಡೀ ಕರ್ನಾಟಕದಲ್ಲಿ ಬಹುಪಾಲು ಕೋಚಿಂಗ್ ಸಂಸ್ಥೆಗಳು ನೊಂದಣಿ ಆಗಿಲ್ಲ.

ಕರ್ನಾಟಕ ಎಜುಕೇಷನ್ ಕಾನೂನು 1983ರ ಅನುಭಾಂದ 35 ರ ಮತ್ತು ಕರ್ನಾಟಕ tutorial ಇನ್ಸ್ಟಿಟ್ಯೂಷನ್ ಕಾನೂನು 2001 ಪ್ರಕಾರ ಸ್ಥಳೀಯ ಬ್ಲಾಕ್ ಎಜುಕೇಷನ್ ಅಧಿಕಾರಿಗಳು ಈ ಕೋಚಿಂಗ್ ಕೇಂದ್ರಗಳನ್ನು ನೊಂದಣಿ ಮಾಡಲು ವಿಫಲರಾಗಿದ್ದಾರೆ. ಈ ಹಿನ್ನಲೆಯಲ್ಲಿ ಮಳವಳ್ಳಿಯ ಘಟನೆ ಇಡೀ ಸಮಾಜಕ್ಕೆ ಮತ್ತು ಸರ್ಕಾರಕ್ಕೆ ಎಚ್ಚರಿಕೆಯ ಗಂಟೆಯಾಗಿದೆ.

ಕರ್ನಾಟಕದಲ್ಲಿ ಒಂದು ಅಂದಾಜಿನ ಪ್ರಕಾರ, ಒಂದು ಕೋಟಿಯಷ್ಟು ಮಕ್ಕಳು ಶಾಲೆಗಳಿಗೆ ಹೋಗುತ್ತಾರೆ. ಇವರಲ್ಲಿ ಸರ್ಕಾರಿ ಶಾಲೆಗಳಿಗೆ 54 ಲಕ್ಷ ಮಕ್ಕಳು ಓದುತ್ತಿದ್ದಾರೆ. 20ಲಕ್ಷ ಮಕ್ಕಳು ಕೋಚಿಂಗ್ ಕೇಂದ್ರಗಳಿಗೆ ಹೋಗುತ್ತಿದ್ದಾರೇ ಎಂದು ಅಂದಾಜಿಸಲಾಗಿದೆ. ಪ್ರತಿಯೊಂದು ಕೋಚಿಂಗ್ ಕೇಂದ್ರಕ್ಕೆ 500 ಜನ ಮಕ್ಕಳು ಹೋದರು ಎಂದು ಅಂದಾಜಿಸಿದರೂ ಇಂದು 4,000 ಖಾಸಗೀ ಕೋಚಿಂಗ್ ಕೇಂದ್ರಗಳಿವೆ. ಜತೆಗೆ ನೂರಾರು ಆನ್ಲೈನ್ ಕೋಚಿಂಗ್ ಕೇಂದ್ರಗಳಿವೆ.

ಈ ಶೈಕ್ಷಣಿಕ ದಂಧೆಯನ್ನು ಕಾನೂನಿನ ಚೌಕಟ್ಟು ಒಳಗೆ ತರುವ ಅವಶ್ಯಕತೆ ಇದೆ. ಹೀಗಾದಾಗ ಮಾತ್ರ ಇಂತಹ ನಡೆದ ಘಟನೆಗಳನ್ನು ತಪ್ಪಿಸಬಹುದು.

ಜತೆಗೆ ಕರ್ನಾಟಕದ ಮಠ ಮಾನ್ಯಗಳ ವಸತಿ ಶಾಲೆಗಳನ್ನು ಸಹ ಅರೆ ನ್ಯಾಯಾಂಗ ತನಿಖೆಯನ್ನು ಮಾಡಿಸಬೇಕು. ಈವರೆಗೆ ಸರ್ಕಾರ ಮಾಡಿದ ಈ ವಿಷಯದಲ್ಲಿ ಆಗಿರುವ ಕಾನೂನಿನ ಜಾರಿಯ ಲೋಪವನ್ನು ಸರಿಪಡಿಸಬೇಕೆಂದು ನಾವು ಒತ್ತಾಯಿಸುತ್ತೇವೆ.

★ ಡಾ । ವಿ. ಲಕ್ಷ್ಮಿ ನಾರಾಯಣ

## ಜೇನು ಕುರುಬ ಸಮುದಾಯದ ಶ್ರೀ । ಕರಿಯಪ್ಪ ಅವರ ಬಂಧನದಲ್ಲಿ ಮರಣ

ಎಚ್.ಡಿ ಕೋಟೆ, ಬೇಗೂರು ಪಂಚಾಯತಿ, ಹೊಸಹಳ್ಳಿ ಹಾದಿಯಲ್ಲಿ ಬುಡಕಟ್ಟು ಜನಾಂಗದವರು ವಾಸವಿದ್ದಾರೆ. ಕೆಲವು ದಿನಗಳಿಂಸ ಜಿಕೆ ಮಾಂಸ ಮಾರಾಟ ಮಾಡಿದ್ದಾರೆಂದು DRFO (ಅರಣ್ಯ ಅಧಿಕಾರಿ) ಮೂರು ಜನರನ್ನು ಬಂಧಿಸಿದ್ದರು. ಅವರನ್ನು ವಿಚಾರಣೆ ಮಾಡುವ ಸಮಯದಲ್ಲಿ, ಅವರು ಕರಿಯಪ್ಪ ಎಂಬುವವನು ನಮ್ಮ ಜೊತೆಗೆ ಇದ್ದ ಎಂದು ಹೇಳಿಕೆ ನೀಡಿದ್ದಾರೆ. ಆದ ಕಾರಣ, ಕರಿಯಪ್ಪನನ್ನು ಕರೆದುಕೊಂಡು ಹೋಗಿ RFO ಮತ್ತು DRFO ಅಧಿಕಾರಿಗಳೇ ವಿಚಾರಣೆ ನಡೆಸಿದ್ದಾರೆ. ಆ ಸಂದರ್ಭದಲ್ಲಿ ಆತನಿಗೆ ಚಿತ್ರಹಿಂಸೆಯನ್ನು ನೀಡಿದ್ದಾರೆ. ಈ ಜಿಂಕೆ ಮಾಂಸ ಮಾರಾಟದ ಬಗ್ಗೆ ನನಗೆ ಏನು ಗೊತ್ತಿಲ್ಲ, ಇದಕ್ಕೂ ನನಗು ಯಾವುದೇ ಸಂಬಂಧವಿಲ್ಲ ಎಂದು ಹೇಳಿದ್ದರು, ಆತನ ಮಾತನ್ನು ಲೆಕ್ಕಿಸದೆ ಆತನಾಗಿ ಹಿಂಸೆ ನೀಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಇದಾದ ಕೂಡಲೇ, ಸಮುದಾಯದವರಿಗೆ ಅರಣ್ಯ ಅಧಿಕಾರಿಗಳು ಕರೆ ಮಾಡಿ ಕರಿಯಪ್ಪ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದರು. ಆಸ್ಪತ್ರೆಗೆ ಹೋಗಿ ನೋಡಿದಾಗ ಕರಿಯಪ್ಪ ಮೃತ ಪಟ್ಟಿರುವುದು ಅಧಿಕಾರಿಗಳು ತಿಳಿಸಿರುತ್ತಾರೆ.

ಶ್ರೀ । ಕರಿಯಪ್ಪ ಅವರ ಸಾವು ಅನುಮಾನಾಸ್ಪದ ಸಾವು ಎಂಬ ಕಾರಣಕ್ಕೆ ಎರಡು ದಿನಗಳ ಕಾಲ ಮೃತ ದೇಹವನ್ನು ಆಸ್ಪತ್ರೆಯಲ್ಲಿ ಇಟ್ಟುಕೊಂಡು ಆದಿವಾಸಿ ಮತ್ತು ಕಾರ್ಮಿಕ ಸಂಘಟನೆಗಳು ಸೇರಿ ಧರಣಿ ನಡೆಸಲಾಯಿತು. ಬಂಧನದಲ್ಲೇ ಕೊಲೆಗೀಡಾದ ಶ್ರೀ । ಕರಿಯಪ್ಪ ಅವರಿಗೆ ನ್ಯಾಯ ಒದಗಿಸಬೇಕು ಮತ್ತು ಜವಾಬ್ದಾರರಾದ ಅಧಿಕಾರಿಗಳನ್ನು ಉದ್ಯೋಗದಿಂದ ಅಮಾನತ್ತು ಮಾಡಿ ಬಂಧಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಪಾತ್ರವನ್ನು ಸಲ್ಲಿಸಲಾಯಿತು.

ಶ್ರೀ । ಕರಿಯಪ್ಪ ಅವರು ಆದಿವಾಸಿ ಹಕ್ಕುಗಳಿಗಾಗಿ ಹೋರಾಟವನ್ನು ನಡೆಸುತ್ತಿದ್ದ ಪ್ರಮುಖ ಸಾಮಾಜಿಕ ಕಾರ್ಯಕರ್ತರಾಗಿದ್ದರು. ಈ ಕೊಲೆಯ ಕುರಿತು ಆದಿವಾಸಿ ಸಂಘರ್ಷ್ ಮೋರ್ಚಾ ಮತ್ತು ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯಿಂದ ಸತ್ಯಶೋಧನಾ ತಂಡವು ಹಾಡಿಗೆ ಭೇಟಿ ನೀಡಿ ಶ್ರೀ । ಕರಿಯಪ್ಪ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು.







**ವಸ್ತ್ರಸಂಹಿತೆಯನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಇರಾನ್‌ನ ನೈತಿಕ ಪೊಲೀಸರಿಂದ ಮಾಹ್ಸಾ ಅಮಿನಿ ಹತ್ಯೆಗೀಡಾಗಿದ್ದು, ಇರಾನ್‌ನಲ್ಲಿ ಒಂದು ದಂಗೆಯನ್ನೇ ಸೃಷ್ಟಿಸಿದೆ** | ಚಿತ್ರ (ಬಲಸುತ್ತ): ಟ್ವಿಟ್ಟರ್, CBC, AFP

# ಇರಾನ್‌ನ ಮಹಿಳೆಯರ ಹೋರಾಟಕ್ಕೆ ಜಯವಾಗಲಿ

ವಸ್ತ್ರಸಂಹಿತೆಯನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಇರಾನ್‌ನ ನೈತಿಕ ಪೊಲೀಸರಿಂದ ಮಾಹ್ಸಾ ಅಮಿನಿ ಹತ್ಯೆಗೀಡಾಗಿದ್ದು, ಇರಾನ್‌ನಲ್ಲಿ ಒಂದು ದಂಗೆಯನ್ನೇ ಸೃಷ್ಟಿಸಿದೆ. ಇರಾನ್‌ನ ಮಹಿಳೆಯರಲ್ಲಿ ಮತ್ತು ದುಡಿಯುವ ಜನತೆಯಲ್ಲಿ, ದಮನಕಾರಿ ಧಾರ್ಮಿಕ ಆಳ್ವಿಕೆಯ ವಿರುದ್ಧ ಮಡುಗಟ್ಟಿರುವ ಆಕ್ರೋಶಕ್ಕೆ ಹದೆಗಟ್ಟಿರುವ ಜೀವನ ಮತ್ತು ಜೀವನೋಪಾಯದ ಪರಿಸ್ಥಿತಿಯೂ ಕಾರಣವಾಗಿದ್ದು ಇಡೀ ದೇಶದಲ್ಲಿ ಪ್ರತಿಭಟನೆಯ ಜ್ವಾಲೆ ಭುಗಿಲೆದ್ದಿದೆ. ಈಗಾಗಲೇ ಆಳ್ವಿಕೆಯ ದಾಳಿಗೆ ಐವತ್ತಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಆದಾಗ್ಯೂ ಕ್ರೂರ ದಮನಕಾರಿ ನೀತಿಯನ್ನು ಧಿಕ್ಕರಿಸಿ ಪ್ರತಿಭಟನೆಗಳು ಅವ್ಯಾಹತವಾಗಿ ಮುಂದುವರೆದಿವೆ.

22 ವರ್ಷದ ಕುರ್ದಿಷ್ ಮಹಿಳೆ ಮಾಹ್ಸಾ ಅಮಿನಿ ತನ್ನ ಕುಟುಂಬದವರನ್ನು ನೋಡಲು ಟೆಹರಾನ್‌ಗೆ ಬಂದಿದ್ದಳು. ಸೆಪ್ಟಂಬರ್ 13ರಂದು ಆಕೆಯನ್ನು ಇರಾನ್‌ನ ಕುಪ್ರಸಿದ್ಧ ನೈತಿಕ ಪೊಲೀಸ್ ಪಡೆಯಾಗಿರುವ ಗೈಡೆನ್ಸ್ ಪಟ್ರೋಲ್ (ಮಾರ್ಗದರ್ಶಿ ಗಸ್ತುಪಡೆ) ಸಿಬ್ಬಂದಿಯು ಬಂಧಿಸಿ ಮರುಕಲಿಕೆಯ ಕೇಂದ್ರಕ್ಕೆ ರವಾನಿಸಿದೆ. ಸರಿಯಾದ ರೀತಿಯಲ್ಲಿ ಹಿಜಾಬ್ ಧರಿಸುವುದನ್ನು ಹೇಳಿಕೊಡಲು ಅಲ್ಲಿಗೆ ಕಳುಹಿಸಲಾಗಿದೆ ಎನ್ನಬಹುದು. ಆಕೆಯ ಸೋದರ, ಪೊಲೀಸ್ ಠಾಣೆಯಲ್ಲಿ ಆಕೆಗಾಗಿ ಕಾಯುತ್ತಿರುವಾಗಲೇ, ಅವರ ಕುಟುಂಬದವರಿಗೆ ಸುದ್ದಿ ಮುಟ್ಟಿಸಲಾಗಿದ್ದು, ಮಾಹ್ಸಾ ಅಮಿನಿ ಹೃದಯ ಬೇನೆಯ ಚಿಕಿತ್ಸೆಗಾಗಿ ಆಸ್ಪತ್ರೆಗಾಗಿ ದಾಖಲಾಗಿದ್ದಾಳೆ ಎಂದು ತಿಳಿಸಲಾಗಿದೆ. ಮಾಹ್ಸಾ ಅಮಿನಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾಳೆ. ಪ್ರತ್ಯಕ್ಷದರ್ಶಿಗಳ ಪ್ರಕಾರ ಆಕೆಯನ್ನು ತೀವ್ರವಾಗಿ ಹಿಂಸೆಗೊಳಪಡಿಸಲಾಗಿದ್ದು, ಹೊಡೆಯಲಾಗಿದೆ.

ಮಾಹ್ಸಾ ಅಮಿನಿಯ ಸಾವಿನ ಸುದ್ದಿ ಇರಾನ್‌ನ ಮಹಿಳೆಯರಲ್ಲಿ ಈಗಾಗಲೇ ಮಡುಗಟ್ಟಿದ್ದ ಆಕ್ರೋಶದ ಕಿಡಿಗಳನ್ನು ಒಮ್ಮೆಲೆ ಹೊತ್ತಿಸಿದ್ದು, ಕೆಲವೇ ಕ್ಷಣಗಳಲ್ಲಿ ಮಹಿಳೆಯರು ಬೀದಿಗಿಳಿದಿದ್ದಾರೆ. ಜನತೆಯ ಹಕ್ಕೊತ್ತಾಯ ಮತ್ತು ಅಂತಾರಾಷ್ಟ್ರೀಯ ಮಹಿಳಾ ಚಳುವಳಿಯ ಚರಿತ್ರೆಯಲ್ಲೇ ಒಂದು ಹೊಸ ಅಧ್ಯಾಯ ಬರೆಯಲಾಗಿದ್ದು, ಮಹಿಳೆಯರು ಉತ್ತೇಜನಕಾರಿಯಾದ ಪ್ರತಿಭಟನೆಗೆ ಮುಂದಾಗಿದ್ದಾರೆ. ಮಹಿಳೆಯರ "ಮಹಿಳೆ, ಬದುಕು ಮತ್ತು ಸ್ವಾತಂತ್ರ್ಯ" ಹಾಗೂ "ಆಝಾದಿ ಆಝಾದಿ ಆಝಾದಿ" ಘೋಷಣೆಗಳು ಮತ್ತು ಇದರೊಟ್ಟಿಗೆ "ನಾವೆಲ್ಲರೂ ಮಾಹ್ಸಾ ಒಟ್ಟಿಗಿದ್ದೇವೆ".

ನಾವೆಲ್ಲರೂ ಈ ಹೋರಾಟದಲ್ಲಿ ಒಂದಾಗಿದ್ದೇವೆ" ಎಂಬ ಘೋಷಣೆಯು ಈಗ ವಿಶ್ವದಾದ್ಯಂತ ಮೊಳಗುತ್ತಿದೆ. ತಮ್ಮದೇ ಕೂದಲನ್ನು ಕತ್ತರಿಸಿ ಅದನ್ನು ಚಳುವಳಿಯ ಧ್ವಜದಂತೆ ಪ್ರದರ್ಶಿಸುವ ಮೂಲಕ ಸ್ವಾತಂತ್ರ್ಯ ಪ್ರಿಯರಿಗೆ ಮತ್ತು ಹಕ್ಕುಗಳಿಗಾಗಿ ಹೋರಾಡುವವರಿಗೆ ಮುಂದಿನ ಹಲವು ಪೀಳಿಗೆಗಳ ಕಾಲ ಹೊಸ ಕಲ್ಪನೆಯನ್ನು ಈ ಚಳುವಳಿಯು ನೀಡಿದೆ. ಇರಾನ್ ಒಂದು ವೈವಿಧ್ಯಪೂರ್ಣ ದೇಶವಾಗಿದ್ದು, ಮಾಹ್ಸಾ ಅಮಿನಿಯ ಆಘಾತಕಾರಿ ಸಾವು ವಿಭಿನ್ನ ಹಿನ್ನೆಲೆಯಿರುವ ಇರಾನ್‌ನ ಜನತೆಯನ್ನು ಒಂದುಗೂಡಿಸಿದ್ದು, ಜನರು ತಮ್ಮ ನೋವು, ವೇದನೆ, ಆಕ್ರೋಶ, ಪ್ರತಿರೋಧಗಳನ್ನು ಸಾಮೂಹಿಕವಾಗಿ ಪ್ರದರ್ಶಿಸುತ್ತಿದ್ದಾರೆ. ತಮ್ಮ ವೈಯಕ್ತಿಕ ಬದುಕಿನ ಮೇಲೆ ಮತ್ತು ಬದುಕಿನ ಆಯ್ಕೆಗಳ ಮೇಲೆ ಧಾರ್ಮಿಕ ನಿಯಂತ್ರಣವನ್ನು ಹೇರುವುದರ ವಿರುದ್ಧ ಇರಾನ್ ಮಹಿಳೆಯರ ಹೋರಾಟದ ಹಿನ್ನೆಲೆಯಲ್ಲಿ ನಾವು, ಪ್ರಭುತ್ವದ ವಿರುದ್ಧ, ಪ್ರಭುತ್ವ ಬೆಂಬಲಿತ ಕಾವಲು ಪಡೆಗಳ ವಿರುದ್ಧ ಮತ್ತು ಈ ಪಡೆಗಳು ಕ್ರೂರವಾಗಿ ಚಳುವಳಿಗಳನ್ನು ಹತ್ತಿಕ್ಕುವ, ದಮನಿಸುವುದರ ವಿರುದ್ಧ, ಜನಸಾಮಾನ್ಯರ ಪ್ರತಿರೋಧವು ತೀವ್ರವಾಗುತ್ತಿರುವುದನ್ನು ಗಮನಿಸಬಹುದಾಗಿದೆ.

ಚರಿತ್ರೆಯ ಅನೇಕ ಚಾರಿತ್ರಿಕ ಸನ್ನಿವೇಶಗಳಂತೆಯೇ, ಇರಾನ್‌ನ ಮಹಿಳೆಯರು ಇಂದು ಧಾರ್ಮಿಕ ಕ್ರೌರ್ಯ ಮತ್ತು ದಬ್ಬಾಳಿಕೆಯ ವಿರುದ್ಧ ತೀವ್ರವಾಗಿ ಚಳುವಳಿಯ ಮುಂಚೂಣಿ ಶಕ್ತಿಯಾಗಿ ತಮ್ಮ ಪಾತ್ರ ನಿರ್ವಹಿಸುತ್ತಿದ್ದಾರೆ. ಹಾಗಾಗಿಯೇ ಹೋರಾಟದಲ್ಲಿ ತೊಡಗಿರುವ ಇರಾನ್‌ನ ಮಹಿಳೆಯರು ಮತ್ತು ಸಾಮಾನ್ಯ ಜನರೊಡನೆ ಐಕಮತ್ಯ ಪ್ರದರ್ಶಿಸಲು ಅಂತಾರಾಷ್ಟ್ರೀಯ ಸಮುದಾಯವೂ ಸನ್ನದ್ಧವಾಗಿದೆ.

ಆದಾಗ್ಯೂ ಧಾರ್ಮಿಕ ಮತಾಂಧರು ಮತ್ತು ಅಮೆರಿಕ ಪರ ಇರುವ ಕಾರ್ಯಕರ್ತರು ಮಾಹ್ಸಾ ಅಮಿನಿಯ ಸಾವು ಮತ್ತು ತದನಂತರದ ಪ್ರತಿಭಟನೆಗಳನ್ನು ತಮ್ಮದೇ ಆದ ಇಸ್ಲಾಂ ವಿರೋಧಿ ನಿರೂಪಣೆಗಳೊಂದಿಗೆ ಸಮೀಕರಿಸಿ, ಇರಾನ್‌ನಲ್ಲಿ ಆಡಳಿತ ಬದಲಾವಣೆಗಾಗಿ ಆಗ್ರಹಿಸಲು ಪ್ರಯತ್ನಿಸುತ್ತಿದ್ದಾರೆ. ಭಾರತದಲ್ಲಿ ಹಿಜಾಬ್ ಧರಿಸುವವರನ್ನು ಅಪಮಾನಗೊಳಿಸಿ, ಕಿರುಕುಳ ನೀಡುವವರು ಪ್ರತಿಭಟನಾನಿರತ ಇರಾನ್ ಮಹಿಳೆಯರಿಗೆ ಅನುಕಂಪ ವ್ಯಕ್ತಪಡಿಸಿ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಇಲ್ಲಿ ಹಿಜಾಬ್‌ಗಿಂತಲೂ ಮುಖ್ಯವಾದ ವಿಚಾರ ಎಂದರೆ ಸರ್ವಾಧಿಕಾರಿ ಆಡಳಿತ ವ್ಯವಸ್ಥೆ ಮತ್ತು ಮಹಿಳೆಯರ ಮೇಲೆ ವಸ್ತ್ರ ಸಂಹಿತೆಯನ್ನು ಹೇರುವ ಪಿತೃಪ್ರಧಾನ ಧೋರಣೆ. ಇರಾನ್ ಅಥವಾ ಆಫ್ಘಾನಿಸ್ತಾನದಲ್ಲಿ ಮಹಿಳೆಯರಿಗೆ ತಮ್ಮ ಮೇಲೆ ಹೇರಲಾದ ವಸ್ತ್ರ ಸಂಹಿತೆಯನ್ನು ಅಥವಾ ಉಡುಪು ಧರಿಸುವ ವಿಧಾನವನ್ನು ಧಿಕ್ಕರಿಸಿ ನಿರಾಕರಿಸುವ ಹಕ್ಕು ಇರುವಂತೆಯೇ ಭಾರತದಲ್ಲೂ ಸಹ ಮಹಿಳೆಯರಿಗೆ ಅದನ್ನು ಧರಿಸುವ ಹಕ್ಕನ್ನು ನಿರಾಕರಿಸುವ ತಾರತಮ್ಯದ ಆಗ್ರಹಗಳನ್ನು ನಿರಾಕರಿಸುವ ಹಕ್ಕು ಸಹ ಇರುತ್ತದೆ.

ಮಹಿಳೆಯರ ಸ್ವಾತಂತ್ರ್ಯ ಮತ್ತು ಹಕ್ಕುಗಳಿಗಾಗಿ ಹೋರಾಟವು ಪುರೋಹಿತಶಾಹಿ ಪ್ರಭುತ್ವ ಇರುವ ಇರಾನ್‌ನಲ್ಲಿ ಮುಖ್ಯವಾದಂತೆಯೇ ಫ್ಯಾಸಿಸ್ಟ್ ಆಡಳಿತದತ್ತ ಸಾಗುತ್ತಿರುವ ಭಾರತದಲ್ಲೂ ಮುಖ್ಯವಾಗುತ್ತದೆ. ಪ್ರಜಾಪ್ರಭುತ್ವವನ್ನು ಇಡೀ ವಿಶ್ವಕ್ಕೆ ರಫ್ತು ಮಾಡುವ ಹಾಗೆ ವರ್ತಿಸುವ ಅಮೆರಿಕದಲ್ಲೂ ಇದು ಮುಖ್ಯವಾಗುತ್ತದೆ. ಅಮೆರಿಕದಲ್ಲಿ ಮಹಿಳೆಯರು ಪುನಃ ಗರ್ಭಪಾತದ ಮೂಲಭೂತ ಹಕ್ಕು ಪಡೆಯಲು ಹೋರಾಡಬೇಕಿದೆ. ಇಂದು ಇರಾನ್ ಪುರೋಹಿತಶಾಹಿ ನಿಯಂತ್ರಣದಿಂದ ಪಾರಾಗಲು ಪ್ರಜಾಸತ್ತೆಗಾಗಿ ಹೋರಾಡುತ್ತಿರುವ ಸಂದರ್ಭದಲ್ಲಿ, ಸಾಮ್ರಾಜ್ಯಶಾಹಿಯ ಹಸ್ತಕ್ಷೇಪದ ಪರಿಣಾಮ ಆಧುನಿಕ ಇರಾನ್‌ನ ಪ್ರಗತಿ ಹೇಗೆ ಕುಂಠಿತವಾಗಿದೆ ಎನ್ನುವುದನ್ನೂ ಅರ್ಥಮಾಡಿಕೊಳ್ಳಬೇಕಿದೆ.

1950ರ ಆರಂಭದಲ್ಲಿ ಇರಾನ್ ಸಿಐಎ ಪ್ರಾಯೋಜಿತ ಕ್ಷಿಪ್ರ ಕ್ರಾಂತಿಗೆ ಬಲಿಯಾಗಿ, ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿದ್ದ ಮೊಹಮ್ಮದ್ ಮೊಸಾದೆಹ್ ಸರ್ಕಾರದ ಪತನವನ್ನು ಕಂಡಿತ್ತು. ತದನಂತರ ಇರಾನ್ ಪಹ್ಲವಿ ಕುಟುಂಬದ ರಾಜಪ್ರಭುತ್ವದ ಆಳ್ವಿಕೆಗೆ ಒಳಗಾಗಿತ್ತು. ಮೊಸಾದೆಹ್ ಅನುಸರಿಸುತ್ತಿದ್ದ ಪ್ರಗತಿಪರ, ಪುರೋಗಾಮಿ ಆಡಳಿತ ನೀತಿಗಳು ಮತ್ತು ತೈಲ ಉದ್ಯಮವನ್ನು ರಾಷ್ಟ್ರೀಕರಣಗೊಳಿಸುವ ಯೋಜನೆಗಳು ಸಾಮ್ರಾಜ್ಯಶಾಹಿಗಳ ಕೆಂಗಣ್ಣಿಗೆ ಗುರಿಯಾಗಿ, ಸರ್ಕಾರಕ್ಕೆ ಮುಳುವಾಗಿತ್ತು.

1979ರ ಕ್ರಾಂತಿಯನ್ನು ಪುರೋಹಿತಶಾಹಿ ಶಕ್ತಿಗಳು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದ್ದರಿಂದ ಇರಾನ್ ಒಂದು ಇಸ್ಲಾಮಿಕ್ ಗಣತಂತ್ರವಾಗಿ ರೂಪುಗೊಂಡಿತು. ಆದರೆ ವಿದೇಶಾಂಗ ನೀತಿಗಳನ್ನು ಅನುಸರಿಸುವಲ್ಲಿ, ಆಯತೊಲ್ಲಾ ಖೊಮೆನಿ ಆಡಳಿತವು ಪಹ್ಲವೀ ಯುಗದ ಅಮೆರಿಕ-ಇಸ್ರೇಲ್ ಪರ ನೀತಿಯನ್ನು ಅನುಸರಿಸಲಿಲ್ಲ. ಇರಾನ್‌ನಲ್ಲಿ ಹೋರಾಟನಿರತರಾಗಿರುವ ಪ್ರಜಾಪ್ರಭುತ್ವದ ಪರ ಇರುವ ಕಾರ್ಯಕರ್ತರ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇರಾನ್ ಮೇಲೆ ಅಮೆರಿಕ

**ಇರಾನ್‌ನಲ್ಲಿ ಹೋರಾಟನಿರತರಾಗಿರುವ ಮಹಿಳೆಯರಿಗೆ ನಾವು ಬೇಷರತ್ ಬೆಂಬಲ ನೀಡಬೇಕಿದೆ. ಪುರೋಹಿತಶಾಹಿ, ಧರ್ಮಾಂಧತೆ ಮತ್ತು ಪಿತೃಪ್ರಧಾನ್ಯತೆಯಿಂದ ವಿಮೋಚನೆ ಪಡೆಯುವ ಇರಾನ್ ಮಹಿಳೆಯರ ಹಕ್ಕುಗಳ ಪರವಾಗಿ ನಾವು ನಿಲ್ಲಬೇಕಿದೆ**

ಹೇರಿದ ನಿರ್ಬಂಧಗಳು ಮತ್ತು ಅಮೆರಿಕ-ಇಸ್ರೇಲ್‌ನ ಮೈತ್ರಿಕೂಟವು ಹೇಗೆ ಇರಾನ್‌ನಲ್ಲಿ ದಮನಕಾರಿ ಆಡಳಿತವನ್ನು ಪ್ರೋತ್ಸಾಹಿಸಿತ್ತು ಮತ್ತು ಸ್ಥಳೀಯ ಬೆಂಬಲವನ್ನು ಗಳಿಸುವ ಮೂಲಕ ಈ ಆಡಳಿತವನ್ನು ಸ್ಥಾಪಿಸಿತ್ತು ಎನ್ನುವ ವಾಸ್ತವ ಅರಿವಾಗುತ್ತದೆ.

ಅಮೆರಿಕದ ಆಕ್ರಮಣಕಾರಿ ನೀತಿ ಮತ್ತು ಮಹಿಳಾ ಹಕ್ಕುಗಳು-ಪ್ರಜಾಪ್ರಭುತ್ವದ ನೆಪದಲ್ಲಿ ಹಸ್ತಕ್ಷೇಪ ಮಾಡುವ ರಣತಂತ್ರಗಳು ಎಂತಹ ಅನಾಹುತಗಳನ್ನು ಉಂಟುಮಾಡುತ್ತದೆ ಎನ್ನುವುದಕ್ಕೆ ಅಫ್ಘಾನಿಸ್ತಾನ ಜೀವಂತ ಸಾಕ್ಷಿಯಾಗಿದೆ. ದಶಕಗಳ ಕಾಲ ಆಫ್ಘಾನಿಸ್ತಾನದಲ್ಲಿ ತನ್ನ ಸೇನೆಯ ಮೂಲಕ ನಿಯಂತ್ರಣ ಸಾಧಿಸಿದ್ದ ಅಮೆರಿಕ ಇತ್ತೀಚೆಗೆ ತಾನೇ ನಿರ್ಗಮಿಸಿದ್ದು ಅಲ್ಲಿನ ಆಡಳಿತ ಚುಕ್ಕಾಣಿಯನ್ನು ತಾಲಿಬಾನ್‌ಗೆ ವರ್ಗಾಯಿಸಿದೆ.

ಭಾರತದಲ್ಲೂ ಸಹ ಸಂಘ ಪರಿವಾರವು ತನ್ನ ಸ್ತ್ರೀ ವಿರೋಧಿ, ಮತಾಂಧತೆಯನ್ನು ಮರೆಮಾಚಿ ಮುಸ್ಲಿಂ ಮಹಿಳೆಯರ ಪರ ನಿಲ್ಲುತ್ತದೆ ಎನ್ನುವುದನ್ನು ಗಮನಿಸಿದ್ದೇವೆ. ತ್ರಿವಳಿ ತಲಾಕ್ ವಿರುದ್ಧ ಮತ್ತು ಈಗಿನ ಹಿಜಾಬ್ ವಿರುದ್ಧದ ಸಂಘ ಪರಿವಾರದ ಚಳುವಳಿಯು, ಮುಸ್ಲಿಂ ಮಹಿಳೆಯರ ಸಬಲೀಕರಣ ಮತ್ತು ಅವರ ಬಗ್ಗೆ ಇರುವ ಕಾಳಜಿಯ ಪ್ರತೀಕ ಎಂದು ಬಿಂಬಿಸಲಾಗುತ್ತದೆ. ಆದರೆ ಸಮಾನ ಪೌರತ್ವಕ್ಕಾಗಿ ಮುಸ್ಲಿಂ ಮಹಿಳೆಯರು ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಸಂಘ ಪರಿವಾರದ ಮಹಿಳಾ ಪರ ಮುಖವಾಡ ಕಳಚಿಬಿದ್ದಿದೆ. ಅವಮಾನಕರ ಮಿಥ್ಯೆಗಳನ್ನು ಸೃಷ್ಟಿಸುವುದು, ಆನ್ ಲೈನ್ ಒತ್ತಡಗಳನ್ನು ಹೇರುವುದು, ವಿಷಪೂರಿತ ಬುಲ್ಲಿಬಾಯಿ ಆಪ್‌ಗಳ ಮೂಲಕ ಮಹಿಳೆಯರ ಮೇಲೆ ಆಕ್ರಮಣ ನಡೆಸುವುದು ಮತ್ತು ದಮನಕಾರಿ ಕಾನೂನುಗಳ ಮೂಲಕ ಮುಸ್ಲಿಂ ಮಹಿಳೆಯರನ್ನು ನಿರ್ಬಂಧಿಸುವುದು, ಇವೆಲ್ಲವೂ ಸಂಘ ಪರಿವಾರದ ದ್ವೇಷ ರಾಜಕಾರಣದ ವ್ಯವಸ್ಥಿತ ಶೋಷಣೆಯ ಅಸ್ತ್ರಗಳಾಗಿವೆ. ಝೂಕಿಯಾ ಜಫ್ರಿ ಅವರ ಮರುಪರಿಶೀಲನೆಯ ಅರ್ಜಿಯನ್ನು ತಿರಸ್ಕಾರ ಹಾಗೂ ಸಹ ಅರ್ಜಿದಾರರಾದ ಟೀಸ್ಟಾ ಸೆಟಲ್‌ವಾಡ್ ರವರ ಬಂಧನ, ಬಿಲ್ಕಿಸ್ ಬಾನೋ ಅತ್ಯಾಚಾರಿಗಳ-ಕೊಲೆಗಡುಕರ ಸನ್ಮಾನ ಇವೆಲ್ಲವೂ, ಮುಸ್ಲಿಂ ಮಹಿಳೆಯರನ್ನು ನ್ಯಾಯವಂಚಿತರಾಗಿ ಮಾಡುವ ಪ್ರಕ್ರಿಯೆಗಳೇ ಆಗಿವೆ.

ಇರಾನ್‌ನಲ್ಲಿ ಹೋರಾಟ ನಿರತರಾಗಿರುವ ಮಹಿಳೆಯರಿಗೆ ನಾವು ಬೇಷರತ್ ಬೆಂಬಲ ನೀಡಬೇಕಿದೆ. ಪುರೋಹಿತಶಾಹಿ, ಧರ್ಮಾಂಧತೆ ಮತ್ತು ಪಿತೃಪ್ರಧಾನ್ಯತೆಯಿಂದ ವಿಮೋಚನೆ ಪಡೆಯುವ ಇರಾನ್ ಮಹಿಳೆಯರ ಹಕ್ಕುಗಳ ಪರವಾಗಿ ನಾವು ನಿಲ್ಲಬೇಕಿದೆ. ಪಶ್ಚಿಮ ರಾಷ್ಟ್ರಗಳ ಹಸ್ತಕ್ಷೇಪ ಇಲ್ಲದೆ ತಮ್ಮದೇ ಆದ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ಇರಾನ್ ಜನತೆಯ ಹಕ್ಕುಗಳನ್ನು ನಾವು ಬೆಂಬಲಿಸುತ್ತೇವೆ. ಪಿತೃಪ್ರಧಾನ್ಯತೆ ಮತ್ತು ಸ್ತ್ರೀದ್ವೇಷದ ವಿರುದ್ಧ ನಡೆಯುತ್ತಿರುವ ಹೋರಾಟಗಳು ಸಾಮಾಜಿಕ ಪರಿವರ್ತನೆಗೆ ಅತ್ಯವಶ್ಯವಾಗಿದ್ದು, ಸ್ವಾತಂತ್ರ್ಯ ಮತ್ತು ಪ್ರಜಾತಂತ್ರಕ್ಕಾಗಿ ನಡೆಯುವ ಎಲ್ಲ ಹೋರಾಟಗಳಿಗೂ ಇದು ಸ್ಫೂರ್ತಿ ನೀಡುತ್ತದೆ. ಹೋರಾಟನಿರತ ಇರಾನ್‌ನ ಮಹಿಳೆಯರಿಗೆ ಯಶಸ್ಸು ಲಭಿಸಲಿ.

★ **ದೀಪಂಕರ ಭಟ್ಟಾಚಾರ್ಯ | ಅನುವಾದ: ನಾ ದಿವಾಕರ್**

# ಬಳ್ಳಾರಿ ಗಣಿ ಕಾರ್ಮಿಕರ ನ್ಯಾಯಕ್ಕಾಗಿ ಹೋರಾಟ

ಶಾಂತಮ್ಮ ಅವರು ರು. 50 ಮಾಸಿಕ ವೇತನ ಸಂಪಾದಿಸುತ್ತಾ ಬಳ್ಳಾರಿ ಜಿಲ್ಲೆಯ ಸಂಡೂರಿನ ಗಣಿಗಳಲ್ಲಿ ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ಕೆಲಸ ಮಾಡಿದ್ದಾರೆ. ಅವರ ಮಕ್ಕಳು ಗಣಿ ಪ್ರದೇಶದಲ್ಲೇ ಹುಟ್ಟಿ ಬೆಳೆದಿದ್ದು. 2011ನೇ ಇಸವಿಯಲ್ಲಿ ಗಣಿಗಳು ಇದ್ದಕ್ಕಿದ್ದಂತೆಯೇ ಮುಚ್ಚಿ ಹೋದ ಕಾರಣ ಇವರು ತಮ್ಮ ಕೆಲಸ ಕಳೆದುಕೊಂಡರು, ಮತ್ತು ಕೆಲಸ ಕಳೆದುಕೊಂಡ ಕಾರಣ, ಅವರಿಗೆ ಯಾವುದೇ ರೀತಿಯ ಪರಿಹಾರ ಸಹ ದೊರಕಲಿಲ್ಲ. ಇಂದು ಅವರು ಕೃಷಿಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದು, ರು. 100ರಷ್ಟು ದಿನಗೂಲಿ ಪಡೆಯುತ್ತಿದ್ದಾರೆ.

ಉಮೇಶ್ ಅವರು ಗಣಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅಪಘಾತದ ಕಾರಣ ಅವರ ದೃಷ್ಟಿಯನ್ನು ಕಳೆದುಕೊಂಡರು ಮತ್ತು ಅವರ ಶ್ವಾಸಕೋಶಗಳು ದುರ್ಬಲವಾದವು. ಅವರ ಅರೋಗ್ಯ ತಪಾಸಣೆಗಾಗಿ ಲಕ್ಷಾಂತರ ರೂಪಾಯಿಗಳ ಖರ್ಚು ಮಾಡಬೇಕಾಯಿತು. ಕೆಲಸವನ್ನು ಕಳೆದುಕೊಂಡ ನಂತರ ಅವರಿಗೆ ಬೇರ್ಯಾವುದು ಕೆಲಸ ಸಿಗಲಿಲ್ಲ ಮತ್ತು ಅವರ ಮಕ್ಕಳು ತಮ್ಮ ಶಿಕ್ಷಣಕ್ಕೆ ತಿಲಾಂಜಲಿ ಬಿಟ್ಟು ತಮ್ಮ ಕುಟುಂಬವನ್ನು ಸಾಕಲು ಕೆಲಸ ಮಾಡಲು ಆರಂಭಿಸಿದರು.

ಅಮರೇಶ್ ಅವರು ಸಹ ಬಳ್ಳಾರಿಯ ಗಣಿ ಪ್ರದೇಶದಲ್ಲಿ ಹುಟ್ಟಿ ಬೆಳೆದವರು. ಅವರ ತಾಯಿ ಗಣಿಯಲ್ಲಿ ಕೆಲಸ ಮಾಡಿಕೊಂಡು, ವಾರಕ್ಕೆ ರು. 200 ಸಂಪಾದಿಸಿ ತಮ್ಮ ಕುಟುಂಬವನ್ನು ಸಾಕುತ್ತಿದ್ದರು. ಯಾವುದೇ ರೀತಿಯ ಸಾರಿಗೆ ವ್ಯವಸ್ಥೆ ಇಲ್ಲದೆ ಇದ್ದ ಕಾರಣ ಇವರು ಶಾಲೆಗೆ 20 ಕಿಮಿ ನಡೆದುಕೊಂಡು ಹೋಗುತ್ತಿದ್ದರು. ಬಡತನ ಮತ್ತು ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ, ಇವರು ಶಿಕ್ಷಣವನ್ನು ಬಿಟ್ಟು ಗಣಿಯಲ್ಲಿ "ಸಹಾಯಕರ" ಹುದ್ದೆಯಲ್ಲಿ ಸೇರಿಕೊಂಡರು.

ಶಾಂತಮ್ಮ, ಅಮರೇಶ್, ಉಮೇಶ್ ಮತ್ತು ಅವರ ಮಕ್ಕಳನ್ನು ಒಳಗೊಂಡಂತೆ ಸಾವಿರಾರು ಗಣಿ ಕಾರ್ಮಿಕರು ಅಕ್ಟೋಬರ್ 11ರಿಂದ 13ನೇ ತಾರೀಕು ಸಂಡೂರಿನಿಂದ ಬಳ್ಳಾರಿ ವರೆಗೂ ಪಾದಯಾತ್ರೆಯಲ್ಲಿ ಭಾಗವಹಿಸಿದರು. ಬಳ್ಳಾರಿಯಲ್ಲಿ ಮುಚ್ಚಿದ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಮತ್ತು ತಮ್ಮ ಕೆಲಸ ಕಳೆದುಕೊಂಡ ಗಣಿ ಕಾರ್ಮಿಕರಿಗೆ ಪರಿಹಾರ ನೀಡಬೇಕು ಎಂದು ಈ ಹೋರಾಟವನ್ನು ಹಮ್ಮಿಕೊಂಡಿದ್ದರು. ಒಂದು ದಶಕದ ಈ ಕಾರ್ಮಿಕರ ಹೋರಾಟವು ತಮ್ಮ ನ್ಯಾಯಯುತ ಪಾಲಿಗಾಗಿ ಹಮ್ಮಿಕೊಳ್ಳಲಾಗಿತ್ತು.

**ಗಣಿ ಕಾರ್ಮಿಕರು ಅನುಭವಿಸಿದ ಶೋಷಣೆ**

2011ರ ತನಕ ಬಳ್ಳಾರಿ ಜಿಲ್ಲೆಯಲ್ಲಿ 148 ಗಣಿ ಗುತ್ತಿಗೆಗಳು ನೀಡಿದ್ದು ಅದು 10,868.44 ಹೆಕ್ಟೇರು ಭೂಮಿ ವ್ಯಾಪ್ತಿಯಲ್ಲಿ ಮತ್ತು 25,000 ಗಣಿ ಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಂಡು ನಡೆಯುತ್ತಿತ್ತು. ಬಳ್ಳಾರಿ ಗಣಿಗಾರಿಕೆಯಲ್ಲಿ ನಡೆದ ಅವ್ಯವಹಾರ, ಭ್ರಷ್ಟಾಚಾರ ಬಹಿರಂಗ ಪಡಿಸಿದ್ದ ಮಾಜಿ ಲೋಕಾಯುಕ್ತರವರಾದ ಸಂತೋಷ್ ಹೆಗ್ಡೆ ಅವರ ವರದಿಯ ನಂತರದಲ್ಲಿ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸೆಪ್ಟೆಂಬರ್ 2011ರಲ್ಲಿ ಗಣಿಗಳು ಮುಚ್ಚಿಹೋದವು.

ಲೋಕಾಯುಕ್ತ ವರದಿಯಲ್ಲಿ ಅಕ್ರಮ ಗಣಿಗಾರಿಕೆ ಮತ್ತು ರೆಡ್ಡಿ ಸಹೋದರರ ಸಂಪತ್ತು ಕಬಳಿಕೆಯ ಕುರಿತು ವಿಸ್ತಾರವಾಗಿ ಬರೆಯಲಾಗಿತ್ತು. ಆದರೆ ದಶಕಗಳ ಕಾಲ ತಮ್ಮ ಶ್ರಮವನ್ನು ನೀಡಿದ ಹತ್ತಾರು ಸಾವಿರ ಗಣಿ ಕಾರ್ಮಿಕರು ತಮ್ಮ ಕೆಲಸ ಕಳೆದುಕೊಂಡು ಯಾವುದೇ ರೀತಿಯ ಪರಿಹಾರ ಪಡೆಯದೇ ಅವರ ವ್ಯಥೆಯು ಅಗೋಚರವಾಯಿತು.

ಸರ್ವೋಚ್ಚ ನ್ಯಾಯಾಲಯದ ಜೂಲೈ 2011ರ ಆದೇಶದ ನಂತರದಲ್ಲಿ ಸುಮಾರು 25,000 ಕಾರ್ಮಿಕರು ಬೀದಿಪಾಲಾದರೂ. ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ನೆಪವನ್ನಾಗಿಸಿಕೊಂಡು ಗಣಿ ಮಾಲೀಕರು ಕಾರ್ಮಿಕರಿಗೆ ಕೆಲಸ ಕಳೆದುಕೊಂಡ ಕಾರಣ ನ್ಯಾಯಯುತ ಪರಿಹಾರ ನೀಡದಂತೆ ಮರೆಮಾಚಿಕೊಂಡು ಹೋದರು. 2003ರಿಂದ 2011ರ ವರೆಗೂ ಅದ್ದೂರಿಯಾಗಿ ಲಾಭ ಗಳಿಸಿದ ಗಣಿ ಮಾಲೀಕರು ಕಾರ್ಮಿಕರಿಗೆ ಕನಿಷ್ಠ ವೇತನ ನೀಡದೆ ಶೋಷಣೆಗೆ ಒಳಗಾಗಿಸಿದ್ದರು. ಗಣಿಗಳ ಅಕ್ಕಪಕ್ಕದ ಹಳ್ಳಿಗಳಲ್ಲಿ ವಾಸವಾಗಿರುವವರು ದಲಿತ, ಅಲ್ಪಸಂಖ್ಯಾತ ಮತ್ತು ಇತರೆ ತುಳಿತಕ್ಕೊಳಪಟ್ಟ ಸಮುದಾಯಗಳಿಗೆ ಸೇರಿದವರಾಗಿದ್ದು ಬಹುತೇಕರು ಮಹಿಳೆಯರಾಗಿದ್ದಾರೆ. ಗಣಿಗಳು ಮುಚ್ಚಿದ ನಂತರ ಗಣಿ ಕಾರ್ಮಿಕರ ಕುಟುಂಬಗಳ ಸಣ್ಣ ಮಕ್ಕಳು ಮತ್ತು ವೃದ್ಧರನ್ನು ಒಳಗೊಂಡಂತೆ ಒಂದು ಲಕ್ಷಕ್ಕೂ ಹೆಚ್ಚು ಜನ ಇದರ ಪರಿಣಾಮವನ್ನು ಅನುಭವಿಸುತ್ತಾ ತಮ್ಮ ಜೀವನ ಜೀವನೋಪಾಯವನ್ನು ಕಳೆದುಕೊಂಡರು.

ಮೊದಲಿಂದಲೂ ಗಣಿ ಕಾರ್ಮಿಕರು ಅತಿಶೋಷಿತ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದರು. ಕನಿಷ್ಠ ವೇತನವಿಲ್ಲದೆ, ಯಾವುದೇ ರೀತಿಯ ಮೂಲಭೂತ ಸೌಕರ್ಯಗಳು ಅಥವಾ ಸುರಕ್ಷಾ ಪರಿಕರಗಳು ಇಲ್ಲದೆ ಕೆಲಸ ನಿರ್ವಹಿಸುತ್ತಿದ್ದರು. ಈ ಗಣಿ ಕಾರ್ಮಿಕರ ಶೋಷಣೆಯ ಮೂಲಕ ಗಣಿ ಮಾಲೀಕರು ಲಾಭ ಪಡೆಯಲು ಸಾಧ್ಯವಾಯಿತು. ಕಾರ್ಮಿಕರು ಸಂಘಟಿತರಾಗುವ ಪ್ರಯತ್ನ ಮಾಡಿದ್ದಲ್ಲಿ, ಅವರನ್ನು ತಕ್ಷಣದಲ್ಲೇ ಕೆಲಸದಿಂದ ವಜಾಗೊಳ್ಳುತ್ತಿದ್ದರು ಅಥವಾ ಜೀವ ಬೆದರಿಕೆ ಪಡೆಯುತ್ತಿದ್ದರು.

ಬಳ್ಳಾರಿಯಲ್ಲಿ ಅಕ್ರಮ ಗಣಿಗಾರಿಕೆಯ ಕಾರಣ, ಆಡಳಿತ ವ್ಯವಸ್ಥೆ ಮತ್ತು ಪ್ರಭುತ್ವದ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿತ್ತು ಎಂದು ಕರ್ನಾಟಕ ಲೋಕಾಯುಕ್ತ ಅವರ ವರದಿಯಲ್ಲಿ ಈ ಕೆಳಗಿನಂತೆ ಹೇಳಲಾಗಿದೆ.

“…it is observed that due to a big margin of profit in this illegal trade a mafia type of operation have started with the full connivance and support of Politicians, Officials of the Department of Police, RTO, Mines, Forest, Revenue, Commercial Taxes, KSPCB, Labour, Weight and Measurement department and others.”

**ಗಣಿ ಕಂಪನಿಗಳ ಶೋಷಣೆ ಮತ್ತು ಸರ್ಕಾರದ ನಿರ್ಲಕ್ಷ್ಯ**

ಕಾರ್ಮಿಕರಿಗೆ ಯಾವುದೇ ರೀತಿಯ ಆರ್ಥಿಕ ಪರಿಹಾರ ನೀಡದೆ ಗಣಿ ಕಂಪನಿಗಳು ಕಾರ್ಮಿಕರ ಶ್ರಮದಿಂದ ಲಾಭ ಗಳಿಸಿದ್ದಾರೆ. ಮತ್ತೊಂದೆಡೆಗೆ ಸರ್ಕಾರವು ಕಾರ್ಮಿಕರ ದುಸ್ಥಿತಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಕಾರ್ಮಿಕರನ್ನು ಪುನರ್ವಸತಿಗೊಳಿಸಲು ಅಥವಾ ಅವರಿಗೆ ಮತ್ತೊಮ್ಮೆ ಕೆಲಸ ಒದಗಿಸಲು ವಿಫಲವಾಗಿದೆ. ಪರಿಸರದ ಪುನರ್ವಸತಿಗಾಗಿ ಕ್ರಮವಹಿಸಲಾಗಿದ್ದು, ಕಾರ್ಮಿಕರು ಮತ್ತು ಅವರ ಕುಟುಂಬಸ್ಥರನ್ನು ಬೀದಿಪಾಲು ಮಾಡಲಾಗಿದೆ.

ಹಲವಾರು ಗಣಿಗಳು ಹರಾಜಿಗೆ ಒಳಪಟ್ಟಿದ್ದು, ಮತ್ತಷ್ಟು ಗಣಿಗಳಲ್ಲಿ ಕಾರ್ಯಾಚರಣೆಯನ್ನು ಮತ್ತೆ ಶುರು ಮಾಡಲಾಗಿದೆ. ಈ ಗಣಿಗಳಲ್ಲಿ ಕೆಲಸ ನೀಡುವ ಅವಕಾಶ ಇರುತ್ತದೆ. ಹೀಗಿದ್ದಾಗ್ಯೂ, ಅಕ್ರಮವಾಗಿ ಕೆಲಸದಿಂದ ತೆಗೆದುಹಾಕಲಾದ ಕಾರ್ಮಿಕರಿಗೆ ಮತ್ತೆ ಕೆಲಸ ನೀಡಲು ಅವಕಾಶ ನೀಡದೆ, ಮರುನೇಮಕಾತಿಯ ಹಕ್ಕನ್ನು ಉಲ್ಲಂಘಿಸಿಇತರೆ ಜಿಲ್ಲೆಗಳಿಂದ ವಲಸೆ ಬಂದ ಕಾರ್ಮಿಕರನ್ನು ಗುತ್ತಿಗೆ ಪದ್ಧತಿಯಡಿಯಲ್ಲಿ ನೇಮಕ

ಮಾಡಲಾಗುತ್ತಿದೆ. ಇದು ಕಾನೂನು ಬಾಹಿರವಾಗಿರುತ್ತದೆ.

ಇದೇ ಸಮಯದಲ್ಲಿ ಬಳ್ಳಾರಿ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗಾಗಿ ಮತ್ತು ಪರಿಸರದ ಹಾನಿಯನ್ನು ಸರಿಪಡಿಸಲು ಕಂಪ್ರೆಹೆನ್ಸಿವ್ ಎನ್ವಿರಾನ್ಮೆಂಟ್ ಪ್ಲಾನ್ ಫಾರ್ ಮೈನಿಂಗ್ ಇಂಪ್ಯಾಕ್ಟ್ ಜೋನ್ (CEPMIZ) ಅನ್ನು ಸಮಾಜ ಪರಿವರ್ತನಾ ಸಮುದಾಯ ವಿ. ಕರ್ನಾಟಕ ರಾಜ್ಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನವನ್ನು ನೀಡಿದೆ. ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ದಂಡವನ್ನು ಸಂಗ್ರಹಿಸಿದ ರು. 19,443 ಕೋಟಿ ಮೀಸಲಿಟ್ಟಿದೆ. ಆದರೆ, ಈ ಕಾರ್ಯಯೋಜನೆಯಲ್ಲಿ ಕಾರ್ಮಿಕರ ಪುನರ್ವಸತಿಗಾಗಿ ಯಾವುದೇ ಆರ್ಥಿಕ ಪರಿಹಾರದ ಪಾಲು ನೀಡಿರುವುದಿಲ್ಲ.

**ವ್ಯಾಪಕವಾದ ಪುನರ್ವಸತಿ ಯೋಜನೆಗಾಗಿ ಕಾರ್ಮಿಕರ ಪಾದಯಾತ್ರೆ**

ಅಖಿಲ ಭಾರತ ಕಾರ್ಮಿಕ ಸಂಘಟನೆಗಳ ಕೇಂದ್ರೀಯ ಸಮಿತಿ (AICCTU) ಸಂಯೋಜಿತ ಸಂಘಟನೆಯಾದ ಬಳ್ಳಾರಿ ಜಿಲ್ಲಾ ಗಣಿ ಕಾರ್ಮಿಕರ ಸಂಘದ ವತಿಯಿಂದ ಸಂಡೂರು ತಾಲೂಕಿನಿಂದ ಬಳ್ಳಾರಿ ವರೆಗೂ 70 ಕಿಮಿ ದೂರ ಮೂರು ದಿನಗಳ ಕಾಲ ಅಕ್ಟೋಬರ್ 11ರಿಂದ 13ರ ವರೆಗೂ ಕಾಲ್ನಡುಗೆ ಜಾಥಾವನ್ನು ಹಮ್ಮಿಕೊಂಡಿದ್ದರು. ಪಾದಯಾತ್ರೆಗೆ ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಮತ್ತು ಸಾಮಾಜಿಕ ಕಾರ್ಯಕರ್ತ ಹಾಗು ಚಿತ್ರನಟ ಚೇತನ್ ಅಹಿಂಸಾ ಅವರು ಚಾಲನೆ ನೀಡಿದರು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಮೇಧಾ ಪಾಟ್ಕರ್ ಅವರು ಜೀವನೋಪಾಯ, ಸಮಾನ ಪಾಲು, ಬದಲಾವಣೆಗಾಗಿ ಮತ್ತು ನ್ಯಾಯಕ್ಕಾಗಿ ಈ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ದುಡಿಯುವ ವರ್ಗದ ಸಂಘರ್ಷವು ರೈತ ಹೋರಾಟದೊಂದಿಗೆ ಒಟ್ಟುಗೂಡಿ 'ಜಲ್, ಜಂಗಲ್, ಜಮೀನ್' ಕಬಳಿಸುತ್ತಿರುವ ಕಾರ್ಪೋರೇಟ್-ಪರ ಮತ್ತು ಜನವಿರೋಧಿ ಸರ್ಕಾರದ ವಿರುದ್ಧ ಹೋರಾಟ ನಡೆಸಿ, ನಮ್ಮ ದೇಶವನ್ನು ಕಟ್ಟುವ ಅಸಲು ರೈತ-ಕಾರ್ಮಿಕ ಐಕ್ಯತೆಯನ್ನು ಪ್ರದರ್ಶಿಸಬೇಕು ಎಂದು ಹೇಳಿದರು. ಜನರನ್ನು ಧಾರ್ಮ ಮತ್ತು ಜಾತಿ ಆಧಾರದ ಮೇರೆಗೆ ವಿಭಜಿಸುತ್ತಿರುವ ಮತ್ತು ಕೋಮುವಾದಿ ವಿಚಾರಧಾರೆಯನ್ನು ಅಲ್ಲಗಳೆಯುತ್ತಿರುವ ಸರ್ಕಾರದ ವಿರುದ್ಧ ಸಹ ನಾವು ಹೋರಾಡಬೇಕು ಎಂದು ಹೇಳಿದರು. "ಸರ್ಕಾರವು ಕನಿಷ್ಠ ಮಾತ್ರ ಕೊಡಲು ತಯಾರಿದೆ - ಕನಿಷ್ಠ ವೇತನ, ಕನಿಷ್ಠ ಬೆಂಬಲ ಬೆಲೆ, ಇತ್ಯಾದಿ. ನಾವು ಇದನ್ನು ಒಪ್ಪಲು ಸಾಧ್ಯವಿಲ್ಲ. ನಾವು ನಮ್ಮ ಸಮಪಾಲನ್ನು ಕೇಳಬೇಕು. ನಮ್ಮ ಹಕ್ಕನ್ನು ನಾವು ಕೇಳುತ್ತಿದ್ದೇವೆ. ನಮ್ಮ ಸಂವಿಧಾನವನ್ನು ಉಳಿಸಲು ನಾವು ಹೋರಾಡುತ್ತಿದ್ದೇವೆ," ಎಂದು ಹೇಳಿದರು.

"ರೈತರ ಅನಿರ್ದಿಷ್ಟಾವಧಿ ಹೋರಾಟದ ಕಾರಣ ಸರ್ಕಾರವು ರೈತ-ವಿರೋಧಿ ಕಾಯ್ದೆಗಳನ್ನು ಹಿಂಪಡೆಯಲು ಸಾಧ್ಯವಾಯಿತು. ಅದೇ ರೀತಿಯಲ್ಲಿ ಕಾರ್ಮಿಕರು ಸಹ ಹೋರಾಟವನ್ನು ನಿರ್ಮಿಸಬೇಕು," ಎಂದು ಚೇತನ್ ಅಹಿಂಸಾ ಅವರು ಮಾತನಾಡಿದರು. ಗಣಿಕಾರ್ಮಿಕರ ಹೋರಾಟಕ್ಕೆ ಮತ್ತು ಅವರ ನ್ಯಾಯಯುತ ಹಕ್ಕೊತ್ತಾಯಗಳಿಗೆ ಅವರ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು.

ತಮ್ಮ ನ್ಯಾಯಯುತ ಹಕ್ಕುಗಳಿಗೆ ಮತ್ತು ಶ್ರಮದ ಸಮಪಾಲಿಗಾಗಿ ನಡೆಸಿದ ಕಾರ್ಮಿಕರ ಹೋರಾಟದ ಫಲವಾಗಿಯೇ, ರು. 19,443 ಕೋಟಿ ದಂಡ ಸಂಗ್ರಹಿಸಲಾಯಿತು. ಮಹಿಳೆಯರು, ಮಕ್ಕಳು, ವೃದ್ಧರು ಎಲ್ಲರೂ ಒಟ್ಟುಗೂಡಿ ಪಾದಯಾತ್ರೆಯಲ್ಲಿ ಭಾಗವಹಿಸಿದರು ಮತ್ತು ಹಳ್ಳಿ-ಹಳ್ಳಿಗೆ ತಮ್ಮ ಹಕ್ಕೊತ್ತಾಯದ ಪ್ರಚಾರವನ್ನು ನಡೆಸಿದರು. ಹಳ್ಳಿ ಜನರು ಕಾರ್ಮಿಕರ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು.

ಅಕ್ಟೋಬರ್ 13ರಂದು 70 ಕಿಮಿ ಪಾದಯಾತ್ರೆಯು ಬಳ್ಳಾರಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಮುಕ್ತಾಯಗೊಂಡಿದ್ದು, ಕಾರ್ಮಿಕರ ಹಕ್ಕೊತ್ತಾಯಗಳ ಕುರಿತು ಚರ್ಚೆ ನಡೆಸಲಾಗುವುದು ಮತ್ತು ಕಾರ್ಮಿಕರಿಗಾಗಿ ವಿಶೇಷ ಪುನರ್ವಸತಿ ಯೋಜನೆಯನ್ನು ಕಲ್ಪಿಸಬೇಕಾಗುತ್ತದೆ ಎಂದು ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಅದರಂತೆಯೇ ಬಳ್ಳಾರಿ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು.

ಕಾರ್ಮಿಕರ ಹಕ್ಕುಗಳನ್ನು ಮತ್ತಷ್ಟು ತಿರಸ್ಕರಿಸಲು ಸಾಧ್ಯವಿಲ್ಲ. ಸರ್ಕಾರವು ಗಣಿ ಕಾರ್ಮಿಕರಿಗೆ ನಡೆದಿರುವ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸುವುದು ಅತ್ಯಗತ್ಯ. ನ್ಯಾಯ, ಘನತೆಯುತ್ತ ಬದುಕು ಮತ್ತು ಸಮಪಾಲಿಗಾಗಿ ನಡೆಸುತ್ತಿರುವ ಬಳ್ಳಾರಿ ಜಿಲ್ಲಾ ಗಣಿ ಕಾರ್ಮಿಕರ ಹೋರಾಟವು ಯಶಸ್ವಿಗೊಳ್ಳುತ್ತದೆ.

★ **ಮೈತ್ರೇಯಿ ಕೃಷ್ಣನ್**




**ಸಂಡೂರು ತಾಲೂಕಿನಿಂದ ಬಳ್ಳಾರಿ ವರೆಗೂ 70 ಕಿಮಿ ದೂರ ಮೂರು ದಿನಗಳ ಕಾಲ ಅಕ್ಟೋಬರ್ 11ರಿಂದ 13ರ ವರೆಗೂ ಬಳ್ಳಾರಿ ಜಿಲ್ಲಾ ಗಣಿ ಕಾರ್ಮಿಕರ ಸಂಘ (AICCTU) ಕಾಲ್ನಡುಗೆ ಜಾಥಾವನ್ನು ಹಮ್ಮಿಕೊಂಡಿದ್ದರು.**

# ಯಶಸ್ಸು ಪಡೆದ ಗಣಿ ಕಾರ್ಮಿಕರ ಹೋರಾಟದ ದೃಶ್ಯಾವಳಿಗಳು














# ಕಾರ್ಮಿಕ ವರ್ಗದ ಮೇಲೆ ಫ್ಯಾಸಿಸ್ಟ್ ದಾಳಿ

> ಒಬ್ಬ ವ್ಯಕ್ತಿ ಫ್ಯಾಸಿಸಂನ ನಿರ್ಣಾಯಕ ವಿಶ್ಲೇಷಣೆಯನ್ನು ತಿಳಿದುಕೊಳ್ಳಲು ಫ್ಯಾಸಿಸಂ ವಿರುದ್ಧ ನಡೆಯುವ ಸಮಾವೇಶಕ್ಕೆ ಹೋಗುವುದಿಲ್ಲ. ಫ್ಯಾಸಿಸಂ ಎಂದರೆ ಏನು ಮತ್ತು ಅದರ ಅಸ್ತಿತ್ವವು ನಾನಾ ರೀತಿಯ ಜನರಿಗೆ ಏನು ಮಾಡುತ್ತದೆ ಮತ್ತು ಅವರು ಅದನ್ನು ಹೇಗೆ ಮತ್ತು ಎಷ್ಟು ಪರಿಣಾಮಕಾರಿಯಾಗಿ ವಿರೋಧಿಸುತ್ತಿದ್ದಾರೆ ಎಂಬುದನ್ನು ನೋಡಲು ಅಲ್ಲಿಗೆ ಹೋಗುತ್ತಾನೆ/ಳೆ.
>
> **- ಕೆ.ಬಾಲಗೋಪಾಲ್**

ಕಾರ್ಮಿಕ ವರ್ಗವು ಎದುರಿಸುತ್ತಿರುವ ಉದ್ಯೋಗದ ಅಭದ್ರತೆ, ಸಾಮಾಜಿಕ ಭದ್ರತೆಯ ಕೊರತೆ, ಶೋಷಣೆಯ ಕೆಲಸದ ಪರಿಸ್ಥಿತಿಗಳು, ಕಡಿಮೆ ವೇತನ ಮತ್ತು ಕಾರ್ಮಿಕ ಸಂಘಟನೆಗಳನ್ನು ನಾಶಮಾಡುವುದು ಇತ್ಯಾದಿ ಸಮಸ್ಯೆಗಳಿಗೆ ಕೊನೆಯೇ ಇಲ್ಲವೇನೋ ಎಂಬಾಂತಾಗಿದೆ. ವಾಸ್ತವವೆಂದರೆ 90% ಕ್ಕಿಂತ ಹೆಚ್ಚು ಕಾರ್ಮಿಕರು ಅಸಂಘಟಿತ ವಲಯದಲ್ಲಿದ್ದಾರೆ ಮತ್ತು 60% ಕಾರ್ಮಿಕರು ದಿನವೊಂದಕ್ಕೆ ರೂ. 375/- ಮಾತ್ರ ಸಂಪಾದಿಸುತ್ತಾರೆ. ನಿರುದ್ಯೋಗವು 40 ವರ್ಷಗಳ ಗರಿಷ್ಠ ಮಟ್ಟದಲ್ಲಿದೆ. ವಾಸ್ತವವಾಗಿ ಇಂದು ಕಾರ್ಮಿಕರ ಅನಿಶ್ಚಿತತೆಯನ್ನು ಪ್ರತಿಬಿಂಬಿಸುತ್ತದೆ, ದೇಶದಲ್ಲಿ ವಾರ್ಷಿಕವಾಗಿ 25% ರಷ್ಟು ದಿನಗೂಲಿ ಕಾರ್ಮಿಕರು ಅತ್ಮಹತ್ಯೆಮಾಡಿಕೊಳ್ಳುತ್ತಿದ್ದಾರೆ, ಅಂದರೆ ಒಟ್ಟು 42,000 ಕಾರ್ಮಿಕರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಬಹುಪಾಲು ಕಾರ್ಮಿಕರು ದುಡಿಯುವ ಬಡವರ ವರ್ಗಕ್ಕೆ ಸೇರಿದ್ದಾರೆ, ತಮ್ಮ ದೈನಂದಿನ ಜೀವನವನ್ನು ಅಭದ್ರತೆಯಿಂದ ಕೂಡಿರುವ ಜೀವನನೋಪಾಯದೊಂದಿಗೆ ನಡೆಸಬೇಕಾಗಿದೆ.

ಅದೇ ಸಮಯದಲ್ಲಿ, ಜಾತಿ-ಊಳಿಗಮಾನ್ಯ ಮತ್ತು ಪಿತೃಪ್ರಧಾನ ವ್ಯವಸ್ಥೆಗಳು ಹಲವಾರು ವಲಯಗಳಲ್ಲಿ ತಮ್ಮ ಕ್ರೌರ್ಯವನ್ನುಮುಂದುವರೆಸುತ್ತಿವೆ. ಉದಾಹರಣೆಗೆ, ಸ್ವಚ್ಛತ ಕಾರ್ಯ ನಿರ್ವಹಿಸುವ ಕಾರ್ಮಿಕರು ಮತ್ತು ಮ್ಯಾನುಯಲ್ ಸ್ಕ್ಯಾವೆಂಜರ್ಗಳು ಹೆಚ್ಚಾಗಿ ದಲಿತ ಸಮುದಾಯಗಳಿಗೆ ಸೇರಿದ್ದಾರೆ, ಅಂಗನವಾಡಿ ಮತ್ತು ಬಿಸಿಯೂಟ ಕಾರ್ಮಿಕರು ಮತ್ತು ಗೃಹ ಕಾರ್ಮಿಕರು ಪ್ರಧಾನವಾಗಿ ಮಹಿಳೆಯರಾಗಿದ್ದಾರೆ. ಗುಲಾಮಿ ಪದ್ಧತಿಯಲ್ಲಿ ನರಳುತ್ತಿರುವ ಕಾರ್ಮಿಕರು ಹೆಚ್ಚಾಗಿ ಆದಿವಾಸಿಗಳಾಗಿದ್ದಾರೆ. ಕೆಲಸ ಮಾಡುವ ಮಹಿಳೆಯರ ಪ್ರಮಾಣ ಕಡಿಮೆಯಾಗುತ್ತಿದ್ದಾಗ್ಯೂ, ಲಿಂಗಾಧಾರಿತ ಕೂಲಿಯಲ್ಲಿನ ತಾರತಮ್ಯ ಹೆಚ್ಚಾಗುತ್ತಿದೆ.

2 ಕೋಟಿ ಉದ್ಯೋಗಗಳನ್ನು ಸೃಷ್ಠಿಸುತ್ತೇವೆಂದು ನೀಡಿದ್ದ ಭರವಸೆಯನ್ನು ಮರೆತುಬಿಡಲಾಗಿದೆ, ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಉದ್ಯೋಗಗಳನ್ನು ಕಸಿದುಕೊಳ್ಳುತ್ತಿವೆ ಮತ್ತು ನಿರುದ್ಯೋಗ ಬಿಕ್ಕಟ್ಟನ್ನು ಉಲ್ಬಣಗೊಳಿಸುತ್ತವೆ. ಈ ಉದ್ಯೋಗದ ಬಿಕ್ಕಟ್ಟು ಕಾರ್ಮಿಕ ವರ್ಗವನ್ನು, ವಿಶೇಷವಾಗಿ ತಳಮಟ್ಟದಲ್ಲಿರುವ ಮತ್ತು ತುಳಿತಕ್ಕೊಳಗಾದ ಸಮುದಾಯಗಳಿಂದ ಬಂದಂತಹ ಕಾರ್ಮಿಕರನ್ನು ಮತ್ತೆ ಬಡತನ, ಸಾಲ, ಸುರಕ್ಷಿತವಲ್ಲದ ಜೀವನೋಪಾಯಗಳು ಮತ್ತು ಹಸಿವಿನ ಸುಳಿಗೆ ದೂಡುತ್ತಿದೆ.

ಭಾರತದ ಮೇಲೆ ಫ್ಯಾಸಿಸಂನ ಭೀತಿ ಆವರಿಸಿದೆ. ಮೂಲಭೂತ ವಿಶಿಷ್ಟ ಲಕ್ಷಣಗಳನ್ನು ಮರೆತು ಇಂದಿನ ರಾಜಕೀಯ ಪರಿಸ್ಥಿತಿಯನ್ನು ತುರ್ತು ಪರಿಸ್ಥಿತಿಯೊಂದಿಗೆ ಅನೇಕರು ಸಮೀಕರಿಸುತ್ತಿದ್ದಾರೆ. ಮುಖ್ಯವಾಗಿ ಇಂದಿನ ಭಾರತೀಯ ಫ್ಯಾಸಿಸಂ ಹಿಂದುತ್ವದ ಸಿದ್ಧಾಂತದಲ್ಲಿ ಬೇರೂರಿದೆ, ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಆರ್.ಎಸ್.ಎಸ್ ಮತ್ತು ಅದರಡಿಯಲ್ಲಿರುವ ಸಂಘ ಸಂಸ್ಥೆಗಳ ಕೇಂದ್ರ ಸ್ಥಾನವಾಗಿದೆ.

ಭಾರತೀಯ ಫ್ಯಾಸಿಸಂನ ಮುಖ್ಯವಾದ ವೈಶಿಷ್ಟ್ಯಗಳೆಂದರೆ, ಸಂವಿಧಾನ ಮತ್ತು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಪಹಾಸ್ಯ ಮಾಡುವುದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಸಂಸ್ಥೆಗಳನ್ನು ಕಿತ್ತುಹಾಕುವುದು, ಸೈದ್ಧಾಂತಿಕ ಭಿನ್ನಾಭಿಪ್ರಾಯ ಹೊಂದಿರುವವರಿಗೆ ಕಿರುಕುಳ ನೀಡುವುದು, ಹಿಂದುತ್ವ ರಾಷ್ಟ್ರೀಯತೆಯ ಭಾಷಣ ಮಾಡುವುದು, ಹಿಂದೂ ಪ್ರಾಬಲ್ಯವಾದಿ ಸಂಘಟನೆಗಳ ಕೈಯಲ್ಲಿ ಹಿಂಸಾಚಾರ ನಡೆಸುವುದು ಮತ್ತು ಹಿಂಧುತ್ವವನ್ನು ಕಾನೂನುಗಳಲ್ಲಿ ತೂರಿಸುವುದು (ಆರ್ಟಿಕಲ್ 370 ರ ರದ್ದತಿ, ಪೌರತ್ವ ತಿದ್ದುಪಡಿ ಕಾಯಿದೆ, ಕರ್ನಾಟಕದ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಅನ್ನು ನಿಷೇಧಿಸುವುದು ಇತ್ಯಾದಿ), ಖಾಸಗೀಕರಣ ಮಾಡುವುದು ಇತ್ಯಾದಿ. ಇವುಗಳ ಮೂಲಕ ಹಿಂದೆಂದೂ ಕಂಡುಕೇಳರಿದಂತಹ ಮಟ್ಟದಲ್ಲಿ ಕೋಮು ಧ್ರುವೀಕರಣ ಮತ್ತು ಮುಸ್ಲಿಮರನ್ನು ಮೂಲೆಗುಂಪುಗೊಳಿಸುವುದು, ಜಾತಿ ವ್ಯವಸ್ಥೆಯನ್ನು ಬಲಗೊಳಿಸುವುದು ಮತ್ತು ಮೋದಿ ಸರ್ಕಾರದ ಸಹಜ ಕ್ರಿಯೆಯಾದ ಕಾರ್ಪೋರೇಟ್ ಪರ ಅಜೆಂಡಾಗಳನ್ನು ಜಾರಿಗೊಳಿಸುವುದು ನಡೆಯುತ್ತಿದೆ. ಮತ್ತೊಂದು ಪ್ರಮುಖ ವೈಶಿಷ್ಟ್ಯವೆಂದರೇ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಅಂಗೀಕರಿಸಿ ಕಾರ್ಮಿಕ ವರ್ಗದ ವಿರುದ್ಧ ಆಡಳಿತ ವರ್ಗ ಸಾರಿರುವ ಮುಕ್ತ ಯುದ್ಧ.

ನವ ಉದಾರವಾದಿ ನೀತಿಗಳು, ಕಾರ್ಪೋರೇಟ್ ರಾಜ್ ಮತ್ತು ಕ್ರೋನಿ ಬಂಡವಾಳಶಾಹಿ (ಸರ್ಕಾರದ ಸವಲತ್ತುಗಳೊಂದಿಗೆ ಲಾಭಗಳಿಸುವವರು)

> "ಜನಪ್ರಿಯ ಫ್ಯಾಸಿಸಂ ಇಂದಿನ ಪರಿಸ್ಥಿತಿಯಲ್ಲಿ ಹೊಸ ಆರ್ಥಿಕ ನೀತಿಯನ್ನು ವಿರೋಧಿಸುವ ದೊಡ್ಡ ಪ್ರದರ್ಶನವನ್ನು ಮಾಡುತ್ತಿತ್ತು. ಬಿಜೆಪಿ ಅದನ್ನು ಮಾಡುವುದಲ್ಲದೆ, ಆರ್ಥಿಕತೆಯ ಉದಾರೀಕರಣವನ್ನು ಪ್ರೋತ್ಸಾಹಿಸಿ ಅತ್ಯಂತ ಲಜ್ಜೆಗೆಟ್ಟ ವಾದಗಳನ್ನು ಮಾಡುತ್ತದೆ."
>
> – ಕೆ. ಬಾಲಗೋಪಾಲ್

ನವ ಉದಾರವಾದಿ ನೀತಿಗಳಾದ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಮತ್ತು ಕಲ್ಯಾಣ ರಾಜ್ಯ ವ್ಯವಸ್ಥೆಯನ್ನು ವಾಪಸ್ಸು ಪಡೆದಿದ್ದರ ಫಲ ಉಂಟಾಗಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ನಿರುದ್ಯೋಗ ಹೆಚ್ಚಾಗಿದೆ, ಕಾರ್ಮಿಕರಿಗೆ ಅನಿಶ್ಚಿತ ಕೆಲಸ ಮತ್ತು ಜೀವನ ಪರಿಸ್ಥಿತಿಗಳು ಸಂಕಷ್ಟಮಯವಾಗಿವೆ ಮತ್ತು ಕಾರ್ಮಿಕರಲ್ಲಿ ಅಸಮಾನತೆಯನ್ನು ಉಂಟುಮಾಡಿ ಕಾರ್ಮಿಕರ ಜೀವನವನ್ನು ನಾಶಮಾಡಿವೆ. ಈ ವ್ಯವಸ್ಥೆಯು ಫ್ಯಾಸಿಸ್ಟ್ ಮತ್ತು ನಿರಂಕುಶ ಪ್ರಭುತ್ವ ಪ್ರಪಂಚದಾದ್ಯಂತ ಅಧಿಕಾರಕ್ಕೆ ಆಧಾರವಾಗಿದೆ. ಪ್ರತಿಗಾಮಿ ಬೂರ್ಜ್ವಾಗಳು ಏರಿರುವು ಈ ವ್ಯವಸ್ಥೆಯಲ್ಲಿಯೇ ಹಿಂದುತ್ವ ಫ್ಯಾಸಿಸಂ ಸಹ ಕಾರ್ಯ ರಕ್ಷಣೆಯನ್ನು ಪಡೆದುಕೊಂಡಿದೆ.

'ಮೇಕ್ ಇನ್ ಇಂಡಿಯಾ' ಅಥವಾ 'ನ್ಯಾಷನಲ್ ಮಾನಿಟೈಸೇಶನ್ ಪೈಪ್‌ಲೈನ್' ಹೆಸರಿನಲ್ಲಿ, ವ್ಯವಸ್ಥಿತ ಖಾಸಗೀಕರಣ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ ಸಂಪೂರ್ಣ ಮಾರಾಟದ ಮೂಲಕ ಇಡೀ ಭಾರತೀಯ ಆರ್ಥಿಕತೆಯು ಈಗ ವಿದೇಶಿ ಬಂಡವಾಳಕ್ಕೆ ತೆರೆದುಕೊಂಡಿದೆ. ಇದು ನೋಟು ಅಮಾನ್ಯೀಕರಣ, ಜಿಎಸ್‌ಟಿ ಮತ್ತು ನಿರಂಕುಶವಾಗಿ ಮಾಡಿದ ಲಾಕ್‌ಡೌನ್‌ಗಳ ಪರಿಣಾಮದ ಜೊತೆಗೆ ಕಾರ್ಪೋರೇಟ್‌ಗಳು ಮತ್ತು ಗಣ್ಯರ ಸಂಪತ್ತಿನಲ್ಲಿ ಹಿಂದೆಂದು ಆಗಿರದಂತಹ ಹೆಚ್ಚಳ ಉಂಟಾಗಿರುವುದರಿಂದ ಇಂದು ಕಾರ್ಮಿಕರು ಮತ್ತಷ್ಟು

ಬಡವಾಗಿದ್ದಾರೆ. ಸಾರ್ವಜನಿಕ ಆಸ್ತಿಗಳು ಮತ್ತು ದೇಶದ ಸಂಪನ್ಮೂಲಗಳನ್ನು ಕಾರ್ಪೋರೇಟ್ ಕುಳಗಳಿಗೆ ವರ್ಗಾಯಿಸುವ ಪರಿಣಾಮವಾಗಿ ಕೆಲವು ಕಾರ್ಪೋರೇಟ್‌ಗಳ (ಕಳೆದ ಎಂಟು ವರ್ಷಗಳಲ್ಲಿ ಅದಾನಿ ಸಂಪತ್ತು ಮೂವತ್ತು ಪಟ್ಟು ಬೆಳೆದಿದೆ) ಕೈಯಲ್ಲಿ ಸಂಪತ್ತಿನ ಕೇಂದ್ರೀಕರಣವಾಗಿದೆ ಮತ್ತು ಕ್ರೋನಿ ಬಂಡವಾಳಶಾಹಿಯ ವ್ಯವಸ್ಥೆಯಿಂದಾಗಿ ಇವರು ಎಲ್ಲಾ ಕ್ಷೇತ್ರಗಳಲ್ಲಿ ಏಕಸ್ವಾಮ್ಯವನ್ನು ಸಾಧಿಸುತ್ತಿದ್ದಾರೆ.

ಸಾರ್ವಜನಿಕ ಸ್ವತ್ತುಗಳನ್ನು ಕಾರ್ಪೋರೇಟ್‌ಗಳಿಗೆ ವರ್ಗಾಯಿಸುವುದರ ಪರಿಣಾಮ, ಕಾರ್ಮಿಕರು ಕೆಲಸವನ್ನು ಕಳೆದುಕೊಳ್ಳುತ್ತಿದ್ದಾರೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ನೀತಿಯನ್ನು ಕೈಬಿಡುಲಾಗುತಿದೆ. ಇದಕ್ಕೆ ಉದಾಹರಣೆಯಾಗಿ ಏರ್ ಇಂಡಿಯಾ ಪ್ರಕರಣ ಸ್ಪಷ್ಟವಾಗಿದೆ. ಅಕ್ಟೋಬರ್ 8, 2021 ರಂದು, ಕೇಂದ್ರ ಸರ್ಕಾರವು ಏರ್ ಇಂಡಿಯಾವನ್ನು ಟಾಟಾ ಕಂಪನಿಗೆ ಮಾರಾಟ ಮಾಡುವುದಾಗಿ ಘೋಷಿಸಿತು. ಜೂನ್ 2022 ರಲ್ಲಿ, ಟಾಟಾ-ಮಾಲೀಕತ್ವದ ಏರ್ ಇಂಡಿಯಾ ತನ್ನ ಉದ್ಯೋಗಿಗಳಿಗಾಗಿ ಸ್ವಯಂ ನಿವೃತ್ತಿ ಯೋಜನೆಯನ್ನು ಪ್ರಾರಂಭಿಸಿತು ಮತ್ತು ಅದೇ ಸಮಯದಲ್ಲಿ ಪ್ರಮುಖ ಸ್ಥಾನಗಳಿಗೆ "ಸರಿಯಾದ ವ್ಯಕ್ತಿಗಳನ್ನು" ನೇಮಿಸಿಕೊಳ್ಳಲು ಉದ್ದೇಶಿಸಿದೆ ಎಂದು ಘೋಷಿಸಿತು. ಏಕಕಾಲದಲ್ಲಿಯೇ ನೇಮಕ ಮತ್ತು ವಜಾಗೊಳಿಸುವ ವ್ಯವಸ್ಥೆಯನ್ನು ರೂಢಿಸಿಕೊಂಡಿರುವುದನ್ನು ನಾವು ಈ ಪ್ರಕರಣದಲ್ಲಿ ನೋಡಬಹುದು!

**ಕಾರ್ಮಿಕರಿಗೆ ನಿಂದನೆ**

ಈ ರೀತಿಯ ಬಂಡವಾಳ ವ್ಯವಸ್ಥೆಯನ್ನು ಬಿಜೆಪಿಯ ಕೇಂದ್ರ ಸರ್ಕಾರ ಸಮರ್ಥಿಸಿಕೊಳ್ಳಲು ಕೇವಲ ಚುನಾವಣೆಗೆ ಕಾರ್ಪೋರೇಟ್‌ಗಳಿಂದ ನಿಧಿ ಸಂಗ್ರಹಣೆ ಮಾಡುತ್ತಾರೆಂಬ ಕಾರಣ ಮಾತ್ರವಲ್ಲ, ಇದು ಅವರಲ್ಲಿ ಅಂತರ್ಗತವಾಗಿ ಬಂದಿರುವ ಕಾರ್ಮಿಕರ ವಿರೋಧಿ ಸಿದ್ಧಾಂತದಿಂದ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ದೇಶದ ಇಡೀ ಸಂಪತ್ತನ್ನು ಸೃಷ್ಟಿ ಮಾಡುವ ಶ್ರಮಿಕವರ್ಗ ತಮ್ಮ ಹಕ್ಕಾಗಿ ಮತ್ತೊಬ್ಬರಿಗೆ ತಲೆಬಾಗದೆ, ತಮ್ಮ ಶಕ್ತಿಯ ಮೂಲಕ ಸಂಘಟಿತರಾಗಿ ರಾಜ್ಯದ ಅಧಿಕಾರ ಹಿಡಿಯುವುದನ್ನು ಹಿಂದುತ್ವ ಫ್ಯಾಸಿಸಂ ಬಲವಾಗಿ ವಿರೋಧಿಸುತ್ತದೆ ಮತ್ತು ಕಾರ್ಮಿಕರು ಮಾಲೀಕರಿಗೆ ಸೇವಕರಾಗಿರಬೇಕೆಂದು ಬಯಸುತ್ತದೆ.

ಕಾರ್ಪೋರೇಟ್ ಪರ ಪಟ್ಟುಬಿಡದೆ ಬ್ಯಾಟಿಂಗ್ ಮಾಡುತ್ತಿರುವ ಮೋದಿ ಅವರು "ಉದ್ಯಮ ಮತ್ತು ಕಾರ್ಪೋರೇಟ್ ಟೀಕಿಸುವ ಸಂಸ್ಕೃತಿ" ಯನ್ನು ಖಂಡಿಸಿದ್ದಾರೆ ಏಕೆಂದರೆ ಅವರು ತಮ್ಮ ವ್ಯವಹಾರದ ಜೊತೆಗೆ ಆದರ್ಶಪ್ರಾಯವಾದ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದು ಅವರು ನಂಬಿರುವುದಾಗಿ ತಿಳಿಸಿದ್ದಾರೆ. ಮೇ 26, 2019 ರಂದು ತಮ್ಮ ಚುನಾವಣಾ ವಿಜಯದ ಭಾಷಣದಲ್ಲಿ ಅವರು ಹೀಗೆ ಹೇಳಿದರು: “ಈಗ, ದೇಶದಲ್ಲಿ ಕೇವಲ ಎರಡು ಜಾತಿಗಳು ವಾಸಿಸುತ್ತಿವೆ ಮತ್ತು ದೇಶವು ಈ ಎರಡು ಜಾತಿಗಳ ಮೇಲೆ ಕೇಂದ್ರೀಕೃತವಾಗಿದೆ. 21 ನೇ ಶತಮಾನದಲ್ಲಿ, ಭಾರತದಲ್ಲಿ ಒಂದು ಜಾತಿ ಬಡವರು ಮತ್ತೊಂದು ಜಾತಿ ಬಡವರನ್ನು ಬಡತನದಿಂದ ಹೊರತರಲು ಬಯಸುವವರ ಜಾತಿಯಾಗಿದೆ ಎಂದು ಹೇಳಿದ್ದಾರೆ.” ತದನಂತರ, 15 ಆಗಸ್ಟ್ 2019 ರಂದು ತಮ್ಮ ಸ್ವಾತಂತ್ರ್ಯ ದಿನದ ಭಾಷಣದಲ್ಲಿ, ಮೋದಿ ಅವರು ಮಾತನಾಡುತ್ತ “ಸಂಪತ್ತು ಸೃಷ್ಟಿ ಮಾಡುವುದು ಒಂದು ದೊಡ್ಡ ರಾಷ್ಟ್ರೀಯ ಸೇವೆಯಾಗಿದೆ ಮತ್ತು ಸಂಪತ್ತು ಸೃಷ್ಟಿಸುವ ಉದ್ಯಮಪತಿಗಳನ್ನು ಅನುಮಾನದಿಂದ" ನೋಡದಂತೆ ಎಚ್ಚರಿಕೆ ನೀಡಿದ್ದಾರೆ.

ಮೋದಿಯ ದೃಷ್ಟಿಯಲ್ಲಿ, ತಮ್ಮ ಶ್ರಮದಿಂದ ಇಡೀ ಸಂಪತ್ತನ್ನು ಉತ್ಪಾದಿಸುವ ಕಾರ್ಮಿಕರು ಸಂಪತ್ತಿನ ಸೃಷ್ಟಿಕರ್ತರಲ್ಲ, ಕಾರ್ಮಿಕರ ಶ್ರಮ ಮತ್ತು ದೇಶದ ಸಂಪನ್ಮೂಲಗಳನ್ನು ದೋಚುವ ಕಾರ್ಪೋರೇಟ್ ಉದ್ಯಮಪತಿಗಳು ಸಂಪತ್ತಿನ ಸೃಷ್ಟಿಕರ್ತರಂತೆ ಮತ್ತು ಕಾರ್ಮಿಕರು ಅವರಿಗೆ ಕೃತಜ್ಞರಾಗಿರಬೇಕಂತೆ, ಇದು ನ್ಯಾಯವೇ ಮೋದಿಜೀ?!

ಆರ್ಥಿಕ ನೀತಿಗಳಲ್ಲಿ ಒಂದಾದ ನೋಟು ಅಮಾನ್ಯೀಕರಣವು ಆಹಾರ, ವೈದ್ಯಕೀಯ ವೆಚ್ಚಗಳು, ಶಾಲಾ ಶುಲ್ಕಗಳು, ಸಾರಿಗೆ ಸೇರಿದಂತೆ ಮೂಲಭೂತ ಅಗತ್ಯಗಳ ವೆಚ್ಚಗಳನ್ನು ಪೂರೈಸಲು ಹೆಣಗಾಡುತ್ತಿರುವ ಕಾರ್ಮಿಕರ ವಿನಾಶಕ್ಕೆ ಕಾರಣವಾಯಿತು. ಇದರಿಂದಾಗಿ ತಮ್ಮ ಜೀವನೋಪಾಯ ಮತ್ತು ವೇತನವನ್ನು ಕಳೆದುಕೊಂಡರು. ಸರ್ಕಾರದ ಈ ಆರ್ಥಿಕ ನೀತಿಯು ಕಾರ್ಮಿಕರ ಮೇಲೆ ಯಾವ ರೀತಿಯ ತಿರಸ್ಕಾರ ಭಾವವನ್ನು ಹೊಂದಿದೆ ಎಂಬುದನ್ನು ಸ್ಪಷ್ಟ ಪಡಿಸಿದೆ.

ಕೋವಿಡ್ ಲಾಕ್‌ಡೌನ್ ಹೇರುವ 4 ಗಂಟೆಗಳ ಮುಂಚಿತವಾಗಿ ಜನರಿಗೆ ಸೂಚನೆ ನೀಡಿದ್ದನ್ನು ನೋಡಿದರೆ ಸರ್ಕಾರ ಕಾರ್ಮಿಕ ಜೀವನ ಮತ್ತು ಅವರ ಜೀವನೋಪಾಯವನ್ನು ಲೆಕ್ಕಿಸುವುದಿಲ್ಲ ಎಂಬುವುದು ಇದರಿಂದ ಬಹಿರಂಗಗೊಂಡಿದೆ. ಏಪ್ರಿಲ್ 24, 2020 ರಂದು, ಅಂದರೆ ತಿಂಗಳ ಕೊನೆಯ ವಾರದಲ್ಲಿ ಲಾಕ್ ಡೌನ್ ಘೋಷಿಸಲಾಯಿತು, ಇದು ಉದ್ಯೋಗದಾತರಿಗೆ ಕಾರ್ಮಿಕರ ವೇತನವನ್ನು ನಿರಾಕರಿಸಲು ಅನುವು ಮಾಡಿಕೊಟ್ಟಿತು ಮತ್ತು ಇದರಿಂದಾಗಿ ವೇತನ-ಕಳ್ಳತನವನ್ನು ಸುಗಮಗೊಳಿಸಲಾಯಿತು. ಕಾರ್ಮಿಕರು ಮತ್ತು ಅವರ ಕುಟುಂಬಗಳು ಬಡತನ, ಹಸಿವು ಮತ್ತು ನಿರ್ಗತಿಕತೆಯನ್ನು ಎದುರಿಸಿದರು. ವಲಸೆ ಕಾರ್ಮಿಕರು ತಮ್ಮ ಸ್ವಂತ ಸ್ಥಳಗಳಿಗೆ ಸಾವಿರಾರು ಕಿಲೋಮೀಟರ್‌ಗಳಷ್ಟು ನಡೆದುಕೊಂಡು ಹೋಗಾಬೇಕಾದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಯಿತು ಮತ್ತು ಇದರಿಂದಾಗಿ ನೂರಾರು ಕಾರ್ಮಿಕರು ತಮ್ಮ ಪ್ರಾಣವನ್ನು ಕಳೆದುಕೊಂಡರು. ವಲಸೆ ಕಾರ್ಮಿಕರನ್ನು ವಿವಿಧ ರೀತಿಯಲ್ಲಿ ಅವಮಾನಿಸಲಾಯಿತು, ಯುಪಿಯ ಬರೇಲಿಯಲ್ಲಿ ರಸ್ತೆಯ ಮಧ್ಯದಲ್ಲಿ ಕಾರ್ಮಿಕರ ಮೇಲೆ ಸೋಂಕುನಿವಾರಕಗಳನ್ನು ಸಿಂಪಡಿಸಿದರೆ, ಬಿಹಾರದಲ್ಲಿ ಗಡಿಯಲ್ಲಿಯೇ ವಲಸೆ ಕಾರ್ಮಿಕರಿಗೆ ಪ್ರವೇಶವನ್ನು ನಿರಾಕರಿಸಲಾಯಿತು. ಲಾಕ್‌ಡೌನ್‌ನಲ್ಲಿ ತಮ್ಮ ಮನೆಗಳಿಗೆ ಹೋಗುವ ಕಾರ್ಮಿಕರಿಂದ ಮುಟ್ಟುಗೋಲು ಹಾಕಿಕೊಳ್ಳಲಾದ ಸಾವಿರಾರು ಮೋಟರ್ ಸೈಕಲ್‌ಗಳನ್ನು ಜೂನ್, 2022 ರಲ್ಲಿ ಹರಾಜು ಮಾಡಿದ್ದರಿಂದ ಯುಪಿ ಸರ್ಕಾರವು 21 ಲಕ್ಷ ರೂಪಾಯಿಗಳನ್ನು ಗಳಿಸಿದೆ! ಎಂಬ ಸಂಗತಿ ಆ ಸರ್ಕಾರದ ಕ್ರೂರ ನೀತಿಯನ್ನು ಸ್ಪಷ್ಟ ಪಡಿಸುತ್ತದೆ.

ಕಾರ್ಮಿಕ ವರ್ಗದ ಹೋರಾಟಗಳನ್ನು ಸರ್ಕಾರ ಅಪರಾಧೀಕರಣಗೊಳಿಸುತ್ತಿವುದು ಕಾರ್ಮಿಕ ವರ್ಗದ ತಿರಸ್ಕಾರವನ್ನು ಎತ್ತಿ ತೋರಿಸುತ್ತದೆ. ಸೂರತ್‌ನ ವಲಸೆ ಕಾರ್ಮಿಕರು, ಕೋವಿಡ್ ಲಾಕ್‌ಡೌನ್ ಸಮಯದಲ್ಲಿ, ತಮ್ಮ ಮನೆಗೆ ಮರಳಲು ಅವಕಾಶ ನೀಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು, ಆ ಸಮಯದಲ್ಲಿ ಅಶ್ರುವಾಯು, ಲಾಠಿ ಚಾರ್ಜ್ ಮಾಡಿ, ಅವರ ವಿರುದ್ಧ ಸುಳ್ಳು ಕ್ರಿಮಿನಲ್ ಪ್ರಕರಣಗಳನ್ನು ದಾಖಲು ಬಂಧಿಸಿಸಲಾಯಿತು. ಸರ್ಕಾರದ ಈ ಪ್ರವೃತ್ತಿಯ ಮತ್ತೊಂದು ಆಘಾತಕಾರಿ ಘಟನೆ ಎಂದರೆ, ಮುಂಬೈನ ರಿಲಯನ್ಸ್ ಎನರ್ಜಿ ಲಿಮಿಟೆಡ್‌ನಲ್ಲಿ ಕೆಲಸ ಮಾಡುವ 5 ಗುತ್ತಿಗೆ ಕಾರ್ಮಿಕರು ಮತ್ತು ಮುಂಬೈ ಎಲೆಕ್ಟ್ರಿಕ್ ನೌಕರರ ಸಂಘದ ಸದಸ್ಯರು ಅನಿಶ್ಚಿತ ಕೆಲಸದ ಪರಿಸ್ಥಿತಿಗಳ ವಿರುದ್ಧ ಮತ್ತು ಕಾರ್ಮಿಕರ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿದ್ದರು. ಹೀಗಾಗಿ ಅವರು ಮಾಡುತ್ತಿದ್ದಂತಹ ಕಾರ್ಮಿಕ ಸಂಘಟನೆಯ ಚಟುವಟಿಕೆಗಳು ಘೋರ ಅಪರಾಧವೆಂಬಂತೆ ಬಿಂಬಿಸಿ ಕಠಿಣ ಕಾನೂನಾದ ಯುಎಪಿಎ ಅಡಿಯಲ್ಲಿ ಆರೋಪ ಹೊರಿಸಿ ಜೈಲಿಗೆ ಕಳುಹಿಸಲಾಯಿತು. ಈ ಕಾರ್ಮಿಕರು 2-3 ವರ್ಷಗಳವರೆಗೆ ಜಾಮೀನು ಸಿಗದೆ ಜೈಲಿನಲ್ಲಿ ಇರಬೇಕಾಯಿತು. ಈ ಕಾರ್ಮಿಕರ ಮೇಲಿರುವ ಆರೋಪವೆಂದರೆ, ಉದ್ದೇಶಪೂರ್ವಕವಾಗಿ ರಿಲಯನ್ಸ್ ಎನರ್ಜಿ ಲಿಮಿಟೆಡ್‌ನ ಕೆಲಸವನ್ನು ಒಂದು ದಿನದ ಮಟ್ಟಿಗೆ ನಿಲ್ಲಿಸಿರುವುದು ಅಷ್ಟೆ, ಅಂತಹ ಆರೋಪಕ್ಕ ಯುಎಪಿಎ ಅಂತಹ ಘೋರ ಕಾನೂನಿನಲ್ಲಿ ಪ್ರಕರಣ ದಾಖಲು ಮಾಡಿರುವುದನ್ನು ನೋಡಿದರೆ ಸರ್ಕಾರ

ಯಾರ ಪರವಾಗಿ ಕೆಲಸ ಮಾಡುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಹೊಸ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರುವುದರೊಂದಿಗೆ ಕೇಂದ್ರ ಸರ್ಕಾರವು ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ನಾಶಪಡಿಸುವ ಮತ್ತು ಅದರ ವಿರುದ್ಧ ಯಾವುದೇ ಹೋರಾಟಗಳು ನಡೆದಲ್ಲಿ ಅವುಗಳನ್ನು ಸದೆ ಬಡಿಯಲಾಗುತ್ತದೆ ಎಂಬ ಸ್ಪಷ್ಟ ಸಂದೇಶವನ್ನು ಈ ಪ್ರಕರಣದಲ್ಲಿ ನೀಡಿದೆ.

**ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳಲ್ಲಿರುವ ರಕ್ಷಣಾ ನಿಯಮಗಳನ್ನು ಕಿತ್ತುಹಾಕುವುದು**

ಈ ಹಿಂದೆ ಆಡಳಿತ ನಡೆಸುತ್ತಿದ್ದವರು ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳಲ್ಲಿರುವ ಪ್ರಯೋಜನಗಳನ್ನು ಕಾರ್ಮಿಕರಿಗೆ ನಿರಾಕರಿಸಲು ಎರಡು ತಂತ್ರಗಳನ್ನು ಉಪಯೋಗಿಸುತ್ತಿದ್ದರು. ಮೊದಲನೇಯದಾಗಿ, ಕಾರ್ಮಿಕ ಕಾನೂನುಗಳಲ್ಲಿ ಕಾರ್ಮಿಕ ಪರ ನಿಯಮವಿದ್ದಾರೆ, ಅದನ್ನು ಅನುಷ್ಠಾನ ಮಾಡದೆ ಕಾರ್ಮಿಕರನ್ನು ದುಸ್ಥಿತಿಯಲ್ಲಿರಿಸುವುದು. ಎರಡನೆಯದು ನ್ಯಾಯಾಂಗ ವ್ಯಾಖ್ಯಾನದ ಮೂಲಕ ಕಾರ್ಮಿಕರಿಗೆ ಇರುವ ಪ್ರಯೋಜನೆಗಳನ್ನು ನೀಡದೆ ದೂರವಿಡುವುದು. ಇದಕ್ಕೆ ಉದಾಹರಣೆ: ಸ್ಟೀಲ್ ಆಥಾರಿಟಿ ಆಫ್ ಇಂಡಿಯಾ ಪ್ರಕರಣದಲ್ಲಿ ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕಾಯಿದೆ, 1970ರಲ್ಲಿ ಗುತ್ತಿಗೆ ಕಾರ್ಮಿಕರಿಗಿರುವ ಎಲ್ಲಾ ಹಕ್ಕುಗಳನ್ನು ನಿರ್ನಾಮ ಮಾಡಲಾಗಿದೆ.

ಕಾರ್ಮಿಕರಿಗಿರುವ ಕಾನೂನು ರಕ್ಷಣೆಗಳನ್ನು ಸಂಪೂರ್ಣವಾಗಿ ಕಿತ್ತುಹಾಕುತ್ತಿರುವುದನ್ನು ನಾವು ಈಗ ನೋಡುತ್ತಿದ್ದೇವೆ. ದೇಶವು ಕೋವಿಡ್‌ನೊಂದಿಗೆ ಹೋರಾಡುತ್ತಿರುವಾಗಲೂ, ಕೇಂದ್ರ ಕಾರ್ಮಿಕ ಸಚಿವಾಲಯವು 05.05.2020 ರಂದು ಎಲ್ಲಾ ರಾಜ್ಯ ಸರ್ಕಾರಗಳಿಗೆ ನೋಟಿಸ್ ಹೊರಡಿಸಿ ಕಾರ್ಮಿಕ ಇಲಾಖೆಯಲ್ಲಿ ಸುಧಾರಣೆಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಅದರಲ್ಲಿ ಈ ಕೆಳಗೆ ನಮೂದಿಸಿರುವ ಅಂಶಗಳನ್ನು ಒಳಗೊಂಡಂತೆ ಮಾಲೀಕರ ಸ್ವಯಂ-ಪ್ರಮಾಣೀಕರಣವನ್ನು ಸಕ್ರಿಯಗೊಳಿಸುವುದು, ತಪಾಸಣಾ ವ್ಯವಸ್ಥೆಯನ್ನು ಕಡಿಮೆಗೊಳಿಸುವಂತೆ ಸೂಚಿಸಿರುವುದು ಸಹ ಇರುತ್ತವೆ.

- ಕೈಗಾರಿಕಾ ವಿವಾದಗಳ ಕಾಯಿದೆ ಅಡಿಯಲ್ಲಿ 100 ಕಾರ್ಮಿಕರ ಮಿತಿಯನ್ನು 300 ಕಾರ್ಮಿಕರಿಗೆ ಹೆಚ್ಚಳ.
- ಗುತ್ತಿಗೆ ಕಾರ್ಮಿಕ ಕಾಯಿದೆಯಡಿಯಲ್ಲಿ ಅಸ್ತಿತ್ವದಲ್ಲಿರುವ 20 ಕಾರ್ಮಿಕರಿಂದ 80 ಕಾರ್ಮಿಕರಿಗೆ ಮಿತಿ ಹೆಚ್ಚಳ
- ಕಾರ್ಖಾನೆಗಳ ಕಾಯಿದೆ ಅಡಿಯಲ್ಲಿ ಕಾನೂನು ಅನ್ವಯವಾಗಲು ಕಾರ್ಮಿಕರ ಮಿತಿಯನ್ನು 10 (ವಿದ್ಯುತ್‌ಚ್ಛಕ್ತಿ ಸಹಾಯ) 20 ಮತ್ತು 20 ರಿಂದ 40 ಕ್ಕೆ ಹೆಚ್ಚಿಸುವುದು
- ಸ್ಥಿರ ಅವಧಿಯ ಉದ್ಯೋಗ (fixed term employment)
- ಕೆಲಸದ ಸಮಯವನ್ನು 8 ರಿಂದ 12 ಗಂಟೆ ಕಾಲ ಹೆಚ್ಚಿಸುವುದು

ಕೇಂದ್ರ ಸರ್ಕಾರವು 4 ಕಾರ್ಮಿಕ ಸಂಹಿತೆಗಳನ್ನು ಸಂಸತ್ತಿನಲ್ಲಿ ಅಂಗೀಕರಿಸಿ ಕಾರ್ಮಿಕ ವರ್ಗದ ಮೇಲೆ ಯುದ್ಧವನ್ನು ಘೋಷಿಸಿದೆ.

ಈ ಕಾರ್ಮಿಕ ಸಂಹಿತೆಗಳು ಕಾರ್ಮಿಕರು ಅತ್ಯಂತ ಕಷ್ಟಪಟ್ಟು ಗಳಿಸಿದ ಹಕ್ಕುಗಳನ್ನು ಕಸಿದುಕೊಳ್ಳುತ್ತವೆ. ಈ ಸಂಹಿತೆಗಳು ಅನ್ವಯವಾಗಲು ಕಾರ್ಮಿಕರ ಮಿತಿ ಮಟ್ಟವನ್ನು ಹೆಚ್ಚಿಸಿಲಾಗಿದೆ, ಆ ಮೂಲಕ ಕಾರ್ಮಿಕರನ್ನು ಕಾನೂನಿನ ರಕ್ಷಣೆಯಿಂದ ಹೊರಗೆ ಇರಿಸುವ ಹುನ್ನಾರ ಮಾಡಲಾಗಿದೆ, ಅಲ್ಲದೆ ಸಂಘಟನೆ ಮತ್ತು ಮುಷ್ಕರ ಮಾಡುವ ಕಾರ್ಮಿಕರ ಹಕ್ಕುಗಳ ಮೇಲೆ ದಾಳಿ ಮಾಡಲಾಗಿದೆ, ಮಹಿಳಾ ಕಾರ್ಮಿಕರಿಗೆ ದೊರಕುತ್ತಿದ್ದ ಹಲವಾರು ರಕ್ಷಣೆಗಳನ್ನು ಹಿಂತೆಗೆದುಕೊಳ್ಳಲಾಗಿದೆ ಮತ್ತು ಗುತ್ತಿಗೆ ಕಾರ್ಮಿಕ ವ್ಯವಸ್ಥೆಯನ್ನು ಹೆಚ್ಚು ಮಾಡಲು ವ್ಯವಸ್ಥಿತವಾದ ಸಂಚು ಮಾಡಲಾಗಿದೆ.

ಈ ಕಾರ್ಮಿಕ ಸಂಹಿತೆಗಳು ಸಂವಿಧಾನದಲ್ಲಿ ಕಲ್ಪಿಸಿರುವ ಕಾರ್ಮಿಕರ ಹಕ್ಕುಗಳ ಮೇಲಿನ ದಾಳಿಯಾಗಿದೆ. ಉದಾಹರಣೆಗೆ, ಸಂವಿಧಾನವು "ಜೀವನ ವೇತನ" ವನ್ನು ಕಲ್ಪಿಸಿದರೆ, ಈ ಸಂಹಿತೆಗಳು "ಹಸಿವಿನ ವೇತನ" ವನ್ನು ನೀಡುತ್ತವೆ; ಕೈಗಾರಿಕೆಗಳ ನಿರ್ವಹಣೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆಯ ಕಡೆಗೆ ರಾಜ್ಯ ನೀತಿಯನ್ನು ರೂಪಿಸಬೇಕೆಂದು ಸಂವಿಧಾನವು ಕಡ್ಡಾಯಗೊಳಿಸುತ್ತದೆ ಆದರೆ ಈ ಸಂಹಿತೆಗಳು ಮಾಲೀಕರ ಸರ್ವಾಧಿಕಾರವನ್ನು ಪ್ರೋತ್ಸಹಿಸುತ್ತವೆ.

**ಕಾರ್ಮಿಕ ವರ್ಗದವರಲ್ಲಿ ಹಿಂದುತ್ವಕ್ಕೆ ಒಪ್ಪಿಗೆ:**

ಕಾರ್ಮಿಕ ವರ್ಗದ ಕ್ರಾಂತಿಕಾರಿ ಸಾಮರ್ಥ್ಯವನ್ನು ತಗ್ಗಿಸಿ ಹಿಂದುತ್ವಕ್ಕೆ ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ. ನವ ಉದಾರವಾದಿ ಯೋಜನೆಗೆ ಕಾರ್ಮಿಕ ವರ್ಗ ಮತ್ತು ಅವರ ಕಾರ್ಮಿಕ ಸಂಘಗಳ ಸಂಘಟನಾ ಮತ್ತು ಹೋರಾಟದ ಸಾಮರ್ಥ್ಯವನ್ನು ಪುಡಿಮಾಡುವ ಅಗತ್ಯವಿದೆ ಎಂದು ಅರ್ಥ ಮಾಡಿಕೊಳ್ಳಬೇಕು. ಇದು ಈಗ ಹಿಂದುತ್ವದೊಂದಿಗೆ ಸೇರಿಕೊಂಡಿದೆ, ಇದು ಒಂದು ವರ್ಗ-ಪ್ರಜ್ಞೆಯ ಉಗ್ರಗಾಮಿ ಕಾರ್ಮಿಕ ವರ್ಗವನ್ನು ತ್ಯಜಿಸುವ ಸಿದ್ಧಾಂತವಾಗಿದೆ.

ಒಂದು ವರ್ಗದ ಕಾರ್ಮಿಕರು ಕೋಮುವಾದಿ, ಮನುವಾದಿ ಮತ್ತು ಫ್ಯಾಸಿಸ್ಟ್ ರಾಜಕೀಯ ಕಲ್ಪನೆಗಳು ಮತ್ತು ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ವಸಾಹತುಶಾಹಿ ಅವಧಿಯಲ್ಲಿಯೂ ಸಹ, ಕಾರ್ಮಿಕ ವರ್ಗದ ಕೆಲ ಗುಂಪುಗಳು ಕೋಮು ಗಲಭೆಯಲ್ಲಿ ಭಾಗವಹಿಸುವುದನ್ನು ನೋಡಲಾಗಿದೆ ಎಂದು ಅಧ್ಯಯನಗಳು ಬಹಿರಂಗಪಡಿಸುತ್ತವೆ. "ವರ್ಗ ಪ್ರಜ್ಞೆ"ಯ ಬದಲಾಗಿ, ಈ ವರ್ಗದ ಕಾರ್ಮಿಕರು ಕೆಲವು "ಸಮುದಾಯ ಪ್ರಜ್ಞೆ" ಯನ್ನು ಪ್ರದರ್ಶಿಸಿದರು ಆದರೂ ಸಹ ಇದು ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಅವರ ಏಕತೆಯನ್ನು ತಡೆಯಲು ಸಾಧ್ಯವಾಗಲಿಲ್ಲ. ಅದಾಗ್ಯೂ, ಇಂದು ನಾವು ಹಿಂದುತ್ವದ ಸಿದ್ಧಾಂತಕ್ಕೆ ಕಾರ್ಮಿಕ ವರ್ಗ ಪ್ರಭಾವ ಹೊಂದುತ್ತಿರುವ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ.

ಸಂಘಪರಿವಾರವು ಯಾವುದೇ ಅಡೆತಡೆಯಿಲ್ಲದೆ ತನ್ನ ಸಿದ್ಧಾಂತವನ್ನು ಜನಸಮೂಹದಲ್ಲಿ ವಿಶೇಷವಾಗಿ ಕಾರ್ಮಿಕವರ್ಗದಲ್ಲಿ ನಿರಂತರವಾಗಿ ಬಿತ್ತುತ್ತಿದೆ ಮತ್ತು ಸಂಘ ಪರಿವಾರದಿಂದ ಕಾರ್ಮಿಕ ವರ್ಗವನ್ನು ಸಜ್ಜುಗೊಳಿಸಲಾಗುತ್ತಿದೆ. ಭಾರತೀಯ ಮಜ್ದೂರ್ ಸಂಘ (ಬಿಎಂಎಸ್) ದಶಕಗಳಿಂದ ಹಿಂದೂ ರಾಷ್ಟ್ರೀಯತೆಯ ಬ್ಯಾನರ್ ಅಡಿಯಲ್ಲಿ ಕಾರ್ಯಕರ್ತರನ್ನು ಸಜ್ಜುಗೊಳಿಸುವಲ್ಲಿ ತೊಡಗಿಸಿಕೊಂಡಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳೋಣಾ. 1955ರಲ್ಲಿ ರಚನೆಯಾದ ಬಿಎಂಎಸ್ ಅನ್ನು ಆರ್‌ಎಸ್‌ಎಸ್ ಆದರ್ಶಗಳೊಂದಿಗೆ ಕಾರ್ಮಿಕ ವರ್ಗದ ನಡುವೆ ಕೆಲಸ ಮಾಡಲು ಸ್ಥಾಪಿಸಲಾಯಿತು. "ಭಾರತೀಯ ಸಂಸ್ಕೃತಿ" ತನ್ನ ಸೈದ್ಧಾಂತಿಕ ಆಧಾರವನ್ನು ರೂಪಿಸುತ್ತದೆ ಮತ್ತು "ವೈವಿಧ್ಯತೆಯಲ್ಲಿ ಏಕತೆ ಮತ್ತು ವಿವಿಧ ರೂಪಗಳಲ್ಲಿ ಏಕತೆಯ ಅಭಿವ್ಯಕ್ತಿ ಭಾರತೀಯ ಸಂಸ್ಕೃತಿ ಅಥವಾ "ಸಮಗ್ರ ಮಾನವತಾವಾದ" ದ ಕೇಂದ್ರ ಚಿಂತನೆಯಾಗಿ ಉಳಿದಿದೆ ಎಂದು ಅದು ಹೇಳುತ್ತದೆ. "ಯಾವುದೇ ದ್ವೇಷದ ಭಾವನೆ ಅಸ್ತಿತ್ವದಲ್ಲಿದ್ದರೆ ಆ ರಾಷ್ಟ್ರೀಯ ಗುರಿಯನ್ನು ಸಾಧಿಸಲಾಗುವುದಿಲ್ಲ" ಮತ್ತು "ಎಲ್ಲಾ ಘಟಕಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಮತ್ತು ಕೆಲಸ ಮಾಡಬೇಕು" ಎಂದು ಅದು ನಂಬುತ್ತದೆ, ಇದನ್ನು ಉದ್ಯಮದಲ್ಲಿ "ಕುಟುಂಬ" ಎಂಬ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸುವ ಮೂಲಕ ಸಾಧಿಸಬಹುದು. ಈ ಆಧಾರದ ಮೇಲೆ, ಬಿಎಂಎಸ್ ಸಂಪೂರ್ಣವಾಗಿ ವರ್ಗ ಹೋರಾಟವನ್ನು ತಿರಸ್ಕರಿಸುತ್ತದೆ ಮತ್ತು "ಕೈಗಾರಿಕಾ ಕುಟುಂಬ" ಎಂಬ ಪರಿಕಲ್ಪನೆಯನ್ನು ಉತ್ತೇಜಿಸುತ್ತದೆ. 5,000 ಕ್ಕೂ ಹೆಚ್ಚು ಅಂಗ ಸಂಸ್ಥೆಗಳನ್ನು ಒಳಗೊಂಡಿರುವ ಇದು ಎಲ್ಲಾ ರಾಜ್ಯಗಳಲ್ಲಿ ಸುಮಾರು 1 ಕೋಟಿ ಸದಸ್ಯತ್ವವನ್ನು ಹೊಂದಿದೆ ಮತ್ತು ದೇಶದ ಅತಿದೊಡ್ಡ ಕೇಂದ್ರ ಕಾರ್ಮಿಕ ಸಂಘವಾಗಿದೆ. ಕಾರ್ಮಿಕರ ವರ್ಗ ಪ್ರಜ್ಞೆಯನ್ನು ಮೊಂಡಾಗಿಸುವಲ್ಲಿ ಮತ್ತು ಹಿಂದೂ ರಾಷ್ಟ್ರೀಯತೆಗೆ ಒಪ್ಪಿಗೆ ನೀಡುವಲ್ಲಿ ಇದು

ಪ್ರಮುಖ ಪಾತ್ರ ವಹಿಸಿದೆ.

ಅದಲ್ಲದೆ, ಹಿಂದಿನ ದಶಕಗಳಲ್ಲಿ ಅಸಂಘಟಿತ ವಲಯದ ಕಾರ್ಮಿಕರು ಮತ್ತು ಅವರ ಬಡತನವನ್ನು ದುರುಪಯೋಗ ಪಡಿಸಿಕೊಂಡು ಕೋಮು ಗಲಭೆಗಳನ್ನು ಮಾಡಿಸಲಾಗುತ್ತಿತ್ತು ಮತ್ತು ಈಗ ಫ್ಯಾಸಿಸ್ಟ್ ಸೈದ್ಧಾಂತಿಕ ಆಕ್ರಮಣವು ಫ್ಯಾಸಿಸ್ಟ್ ರಾಜಕೀಯ ಪ್ರಭಾವಗಳಿಗೆ ಕಾರ್ಮಿಕರನ್ನು ಸುಲಭವಾಗಿ ಬಲಿಪಶುವನ್ನಾಗಿ ಮಾಡುತ್ತದೆ. ಜಾನ್ ಬ್ರೆಮನ್ ಅವರು ಅಹಮದಾಬಾದ್‌ನಲ್ಲಿನ ಕೋಮು ಗಲಭೆಗಳನ್ನು ಅಧ್ಯಯನ ಮಾಡುವಾಗ "ಇಪ್ಪತ್ತನೇ ಶತಮಾನದ ಕೊನೆಯಲ್ಲಿ ನಗರದ ಆರ್ಥಿಕತೆಯ ವ್ಯವಸ್ಥೆಯಲ್ಲಿರುವ ಔಪಚಾರಿಕ ವಲಯದಿಂದ ಕಾರ್ಮಿಕರನ್ನು ಬೃಹತ್ ಪ್ರಮಾಣದಲ್ಲಿ ಹೊರಹಾಕುವಿಕೆ ಮತ್ತು ಆಗ ನಡೆದ ಕೋಮು ಹಿಂಸಾಚಾರದ ಸ್ಫೋಟದ ನಡುವೆ ನೇರವಾದ ಸಂಬಂಧವಿದೆ" ಎಂದು ವಾದಿಸುತ್ತಾರೆ.

**ಫ್ಯಾಸಿಸಂ ಪ್ರತಿರೋಧ:**

"ಒಂದು ವೇಳೆ ಹಿಂದೂರಾಜ್ಯ ಸ್ಥಾಪನೆಯಾದರೆ ಅದು ಈ ದೇಶಕ್ಕೆ ದೊಡ್ಡ ವಿಪತ್ತಾಗುವುದರಲ್ಲಿ ಸಂದೇಹವಿಲ್ಲ. ಇದು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ಅಪಾಯವಾಗಿದೆ. ಆ ಲೆಕ್ಕದಲ್ಲಿ ಇದು ಪ್ರಜಾಪ್ರಭುತ್ವಕ್ಕೆ ಹೊಂದಿಕೆಯಾಗುವುದಿಲ್ಲ. ಹಿಂದೂ ರಾಜ್ ಅನ್ನು ಯಾವುದೇ ಬೆಲೆ ತೆತ್ತಾದರೂ ತಡೆಯಬೇಕು."

- ಅಂಬೇಡ್ಕರ್

ಕಾರ್ಮಿಕ ವರ್ಗಕ್ಕೆ ಇತಿಹಾಸವಿದೆ ಮತ್ತು ಈ ಫ್ಯಾಸಿಸ್ಟ್ ಆಕ್ರಮಣದ ವಿರುದ್ಧ ಹೋರಾಡಲು ನಿಷ್ಠೆಯ ಅವಶ್ಯಕತೆಯಿದೆ. ಭಾರತೀಯ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ, ಕಾರ್ಮಿಕರು ತಮ್ಮನ್ನು ವಿಭಜಿಸುವ ಕೋಮುವಾದಿ ರಾಜಕೀಯವನ್ನು ತಿರಸ್ಕರಿಸಿದರು ಮತ್ತು ವಸಾಹತುಶಾಹಿ ಶಕ್ತಿಗಳಿಗೆ ಹೊಡೆತ ನೀಡಲು ಒಗ್ಗೂಡಿದರು. ತಿಮೋತಿ ಮೇಸನ್ ಪ್ರಕಾರ, ಜರ್ಮನ್‌ನ ಫ್ಯಾಸಿಸ್ಟ್ ನಾಜಿ ಆಳ್ವಿಕೆಯು ಸಹ ಕಾರ್ಮಿಕ ವರ್ಗದ ರಾಜಕೀಯ ಪ್ರತಿರೋಧ ಮತ್ತು ಕಾರ್ಮಿಕರ ವಿರೋಧದ ರೂಪದಲ್ಲಿ ಹೋರಾಟವನ್ನು ಎದುರಿಸಿತು ಎಂದು ಹೇಳಿದ್ದಾರೆ.

ಇತ್ತೀಚೆಗಷ್ಟೇ, ಸ್ವತಂತ್ರ ಭಾರತದ ಅತಿದೊಡ್ಡ ಪ್ರತಿಭಟನೆಗಳಲ್ಲಿ ಒಂದಾದ ರೈತರ ವೀರೋಚಿತ ಹೋರಾಟವನ್ನು ನಾವು ನೋಡಿದ್ದೇವೆ. ಕೇಂದ್ರ ಸರ್ಕಾರವು 3 ರೈತ-ವಿರೋಧಿ ಕಾರ್ಪೋರೇಟ್ ಕಾನೂನುಗಳನ್ನು ಅಂಗೀಕರಿಸಿತ್ತು. ಆದರೆ ಬೃತಹತ್ ಮಟ್ಟದ ರೈತರ ಚಳವಳಿಯು ಸರ್ಕಾರದ ಈ ನಿರಂಕುಶ ಆಡಳಿತವನ್ನು ಬಗ್ಗುಬಡಿಯಿತು. ಮಾಧ್ಯಮಗಳನ್ನು ತನ್ನ ಮುಖವಾಣಿಯನ್ನಾಗಿ ಮಾಡಿಕೊಂಡಿರುವ ಕೇಂದ್ರ ಸರ್ಕಾರವು ರೈತರನ್ನು ರಾಕ್ಷಸೀಕರಿಸಲು ಮತ್ತು ವಿಭಜಿಸಲು ಸಾಧ್ಯವಿರುವ ಎಲ್ಲಾ ತಂತ್ರಗಳನ್ನು ಮಾಡಿದರೂ ವಿಫಲವಾಗಿದೆ. ರೈತರ ಹೋರಾಟಕ್ಕೆ ಸೋತ ಕೇಂದ್ರ ಸರ್ಕಾರ ಕೊನೆಗೆ ಕೃಷಿ ಕಾನೂನುಗಳನ್ನು ರದ್ದುಪಡಿಸಬೇಕಾಯಿತು.

ಕಾರ್ಮಿಕ ವರ್ಗವು ರೈತರು ನಡೆಸಿದ ಪ್ರತಿರೋಧದ ಹೋರಾಟದಿಂದ ಸ್ಫೂರ್ತಿ ಪಡೆಯಬೇಕು ಮತ್ತು ಈ ಫ್ಯಾಸಿಸ್ಟ್ ಆಕ್ರಮಣಕ್ಕೆ ಪ್ರತಿರೋಧವನ್ನು ರಚಿಸಬೇಕು. ಕೇವಲ ಆರ್ಥಿಕತೆಯ ವಿಚಾರಗಳಿಗೆ ಸಂಬಂಧಿಸಿದಂತೆ ಕಾರ್ಮಿಕರ ಹೋರಾಟಗಳು ಸೀಮಿತವಾಗಬಾರದು. ಕೇಂದ್ರ ಕಾರ್ಮಿಕ ಸಂಘಟನೆಗಳು ನಡೆಸುವ ಜಂಟಿ ಪ್ರತಿಭಟನೆಗಳು ಮತ್ತು ಮುಷ್ಕರಗಳು ಅಗತ್ಯ, ಆದರೆ ಸಾಕಾಗುವುದಿಲ್ಲ. ವರ್ಗದ ಪ್ರಶ್ನೆಯು ಸಾಮಾಜಿಕ ಪ್ರಶ್ನೆಯಾಗಿದ್ದು, ವರ್ಗ ಹೋರಾಟವು ಕೇವಲ ಆರ್ಥಿಕ ಹೋರಾಟವಾಗಲಾರದು ಮತ್ತು ಮೂಲಭೂತವಾಗಿ ವರ್ಗ, ಜಾತಿ ಮತ್ತು

**"ಕೋಮುವಾದದ ಪ್ರಶ್ನೆ" ಯ ವಿರುದ್ಧವಾಗಿ, ನಾವು ಕಾರ್ಮಿಕ ವರ್ಗದ ನಡುವೆ ನಿಜವಾದ ಏಕತೆ ಮತ್ತು ಭ್ರಾತೃತ್ವಕ್ಕಾಗಿ ಶ್ರಮಿಸಬೇಕು. ಕ್ರಾಂತಿಕಾರಿ ಮಾರ್ಕ್ಸ್ ವಾದವನ್ನು ಕೋಮುವಾದಕ್ಕೆ ಉತ್ತರವೆಂದು ಪರಿಗಣಿಸಿದ ಭಗತ್ ಸಿಂಗ್, "ಜನರು ಪರಸ್ಪರ ಜಗಳವಾಡುವುದನ್ನು ತಡೆಯಲು "ವರ್ಗ ಪ್ರಜ್ಞೆ" ಇಂದಿನ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.**

ಲಿಂಗ ಸೇರಿದಂತೆ ಎಲ್ಲಾ ಆರ್ಥಿಕ ಮತ್ತು ಸಾಮಾಜಿಕ ದಬ್ಬಾಳಿಕೆಯ ವಿರುದ್ಧದ ಹೋರಾಟವಾಗಿದೆ ಎಂದು ಅರ್ಥಮಾಡಿಕೊಳ್ಳಬೇಕು. ನಿರ್ದಿಷ್ಟವಾಗಿ ಲಿಂಗ ಸಮಾನತೆ ಮತ್ತು ಜಾತಿ ವಿನಾಶವು ಕಾರ್ಮಿಕ ವರ್ಗದ ಸಂಘಟನೆ ಮತ್ತು ಹೋರಾಟಗಳ ಅವಿಭಾಜ್ಯ ಅಂಗವಾಗಿರಬೇಕು. ಕೋಮು ವಿಭಜನೆಗಳ ವಿರುದ್ಧ ಹೋರಾಡುವುದು ಕಾರ್ಮಿಕ ವರ್ಗದ ಪ್ರಮುಖ ಕಾರ್ಯವಾಗಿದೆ, ಏಕೆಂದರೆ ಅವರು ಕಾರ್ಮಿಕ ವರ್ಗವನ್ನು ವಿಭಜಿಸುತ್ತಾರೆ ಮತ್ತು ಇದು ಇಡೀ ದೇಶಕ್ಕೆ ದುರಂತವನ್ನು ಉಂಟುಮಾಡುವ ಭಾರತೀಯ ಫ್ಯಾಸಿಸಂನ ಗುಣಲಕ್ಷಣವಾಗಿದೆ. ಕಾರ್ಮಿಕ ವರ್ಗಕ್ಕೆ ನ್ಯಾಯ ಸಿಗಬೇಕಾದರೆ ಇಂತಹ ಹೋರಾಟಗಳನ್ನು ರೂಪಿಸುವುದು ಅತ್ಯಗತ್ಯವಾಗಿದೆ.

"ಕೋಮುವಾದದ ಪ್ರಶ್ನೆ" ಯ ವಿರುದ್ಧವಾಗಿ, ನಾವು ಕಾರ್ಮಿಕ ವರ್ಗದ ನಡುವೆ ನಿಜವಾದ ಏಕತೆ ಮತ್ತು ಭ್ರಾತೃತ್ವಕ್ಕಾಗಿ ಶ್ರಮಿಸಬೇಕು. ಕ್ರಾಂತಿಕಾರಿ ಮಾರ್ಕ್ಸ್ ವಾದವನ್ನು ಕೋಮುವಾದಕ್ಕೆ ಉತ್ತರವೆಂದು ಪರಿಗಣಿಸಿದ ಭಗತ್ ಸಿಂಗ್, "ಜನರು ಪರಸ್ಪರ ಜಗಳವಾಡುವುದನ್ನು ತಡೆಯಲು "ವರ್ಗ ಪ್ರಜ್ಞೆ" ಇಂದಿನ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಬಡ ಕೂಲಿಕಾರರು ಮತ್ತು ರೈತರಿಗೆ ಅವರ ನಿಜವಾದ ಶತ್ರುಗಳು ಬಂಡವಾಳಶಾಹಿಗಳು ಎಂದು ಸ್ಪಷ್ಟವಾಗಿ ತಿಳಿಸಬೇಕು. ಇದಕ್ಕಾಗಿ ಕಾರ್ಖಾನೆಯ ಗೇಟ್‌ಗಳಲ್ಲಿ ಮಾಡುವ ಸಭೆಗಳನ್ನು ಮಾತ್ರ ಮಾಡದೆ ಕಾರ್ಮಿಕರು ವಾಸಿಸುವ ಪ್ರದೇಶಗಳಿಗೆ ಹೋಗಿ ಪರಿಣಾಮಕಾರಿಯಾಗಿ ಹೋರಾಟಗಳನ್ನು ರೂಪಿಸಬೇಕಾಗಿದೆ.

ಬಾಲಗೋಪಾಲ್‌ರವರು ಈ ರೀತಿ ಹೇಳಿದ್ದಾರೆ;

"ಒಂದೇ ಭರವಸೆಯೆಂದರೆ ಜನರು ಪದೇ ಪದೇ ವ್ಯಕ್ತಪಡಿಸುತ್ತಿರುವ ಪ್ರತಿರೋಧ, ಮತ್ತು ಅನಿಯಂತ್ರಿತ ಪ್ರಕೋಪಗಳಿಗೆ ಮಾತ್ರವಲ್ಲದೆ ಶಿಸ್ತುಬದ್ಧ ಮತ್ತು ಸಂಘಟಿತ ಪ್ರತಿಭಟನೆಗೆ ಅವರ ಸಾಮರ್ಥ್ಯ ... ಫ್ಯಾಸಿಸ್ಟ್ ದಾಳಿಯನ್ನು ಜಯಿಸಲು ಪ್ರತಿರೋಧವು ಸಾಕಷ್ಟು ಪ್ರಬಲವಾಗಿದೆ ಎಂದು ನಂಬುವುದು ತನ್ನನ್ನು ತಾನೇ ಮೋಸಗೊಳಿಸುತ್ತದೆ; ಆದರೆ ಆಕ್ರಮಣವನ್ನು ಧೈರ್ಯದಿಂದ ಎದುರಿಸುವುದರಿಂದ ಮಾತ್ರ ಪ್ರತಿರೋಧವು ತನ್ನನ್ನು ತಾನು ಬಲಪಡಿಸಿಕೊಳ್ಳಬಹುದು."

ಘನತೆಯ ಬದುಕನ್ನು ಬಯಸುವ ಕಾರ್ಮಿಕರಿಗೆ ಈ ದಾಳಿಯ ವಿರುದ್ಧ ಹೋರಾಡುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ದೇಶಾದ್ಯಂತ ಬೆಳೆಯುತ್ತಿರುವ ಫ್ಯಾಸಿಸಂ ವಿರುದ್ಧದ ಹೋರಾಟಗಳಿಂದ ಭರವಸೆ ಮೂಡಿಸೋಣ.

**(ಈ ಲೇಖನವು ಮೊದಲಿಗೆ 'ಲಿಬರೇಶನ್' ಅಲ್ಲಿ ಪ್ರಕಟಿಸಲಾಗಿತ್ತು)**

**★ ಕ್ಲಿಫ್ಟನ್ ಡಿ' ರೋಜಾರಿಯೋ | ಅನುವಾದ: ರಘುಪತಿ ಸಿದ್ದಯ್ಯ**

# ಭಾರತ್ ಜೋಡೋ-ಅನಿವಾರ್ಯತೆಯೂ ಆದ್ಯತೆಗಳೂ

2023ರ ಕರ್ನಾಟಕದ ವಿಧಾನಸಭಾ ಚುನಾವಣೆಗಳು ಮತ್ತು 2024ರ ಲೋಕಸಭಾ ಚುನಾವಣೆಗಳು ಶತಮಾನದ ಇತಿಹಾಸ ಇರುವ ಕಾಂಗ್ರೆಸ್ ಪಕ್ಷದ ಭವಿಷ್ಯದ ದೃಷ್ಟಿಯಿಂದ ನಿರ್ಣಾಯಕವಾಗಲಿವೆ. ಭಾರತದ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯನ್ನು ವಿರೋಧಪಕ್ಷ ಮುಕ್ತ ಮಾಡಲು ತನ್ನದೇ ಆದ "ರಾಜಕೀಯ-ರಣತಾಂತ್ರಿಕ-ಮಾರುಕಟ್ಟೆ" ಕಾರ್ಯತಂತ್ರಗಳನ್ನು ಅನುಸರಿಸುತ್ತಿರುವ ಬಿಜೆಪಿ ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿಯೊಂದಿಗೆ ಒಂದು ಪಕ್ಷದ ಆಧಿಪತ್ಯವನ್ನೂ ಸಾಕಾರಗೊಳಿಸಲು ಸಜ್ಜಾಗುತ್ತಿದೆ. ಭಾರತದ ಒಕ್ಕೂಟ ವ್ಯವಸ್ಥೆಯೊಳಗಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆ ಮತ್ತು ಈ ನೆಲೆಯಲ್ಲೇ ರೂಪುಗೊಂಡಿರುವ ರಾಜಕೀಯ ಅನಿವಾರ್ಯತೆಗಳು ಈ ಮಹತ್ವಾಕಾಂಕ್ಷೆಗೆ ಅಡ್ಡಿಯಾಗಲಿದೆ. ನವ ಉದಾರವಾದ ಮತ್ತು ಮಾರುಕಟ್ಟೆ ಆರ್ಥಿಕತೆ ಸೃಷ್ಟಿಸಿರುವ ವಾತಾವರಣದಲ್ಲಿ ಬಂಡವಾಳ ಮತ್ತು ಮಾರುಕಟ್ಟೆ ಭಾರತದ ರಾಜಕಾರಣದಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ. ಈ ಎರಡು ವಿದ್ಯಮಾನಗಳೇ ಒಕ್ಕೂಟ ವ್ಯವಸ್ಥೆಯ ವಿಭಿನ್ನ ಭಾಗಿದಾರರನ್ನು ಪ್ರಾದೇಶಿಕತೆಯ ಮೂಲಕ ಉತ್ತೇಜಿಸುತ್ತವೆ. ಹಾಗಾಗಿಯೇ ಪ್ರಾದೇಶಿಕ ಪಕ್ಷಗಳು ತಮ್ಮ ಅಸ್ಮಿತೆಯ ರಾಜಕಾರಣದಿಂದ ಹೊರಬಂದು, ಮಾರುಕಟ್ಟೆ ಕೇಂದ್ರಿತ ಬಂಡವಾಳಿಗ ಪಕ್ಷಗಳಾಗಿ ಅಧಿಕಾರ ರಾಜಕಾರಣದಲ್ಲಿ ನೆಲೆ ಕಂಡುಕೊಳ್ಳಲು ಯತ್ನಿಸುತ್ತಿವೆ.

ಈ ಸಂದರ್ಭದಲ್ಲೇ ದೇಶದ ಪ್ರಧಾನ ವಿರೋಧ ಪಕ್ಷವಾದ ಕಾಂಗ್ರೆಸ್ ತನ್ನ ಪುನಶ್ಚೇತನಕ್ಕಾಗಿ 3500 ಕಿಲೋಮೀಟರ್ ಪಾದಯತ್ರೆಯನ್ನು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹಮ್ಮಿಕೊಂಡಿದೆ. ಜಾತಿ, ಮತ, ಮತಧರ್ಮಗಳ ಭಾವನಾತ್ಮಕ ಅಸ್ಮಿತೆಗಳು ರಾಜಕೀಯ ನೆಲೆಯಲ್ಲಿ ಜನಸಮುದಾಯಗಳನ್ನು ಧೃವೀಕರಿಸುತ್ತಿರುವಂತೆಯೇ ಸಾಂಸ್ಕೃತಿಕ ನೆಲೆಯಲ್ಲಿ ವಿಘಟಿತಗೊಳಿಸುತ್ತಿವೆ. ಜಾತಿ ರಾಜಕಾರಣ ಮತ್ತು ಮತಧರ್ಮ ರಾಜಕಾರಣ ಪರಾಕಾಷ್ಠೆ ತಲುಪಿರುವ ಈ ಹೊತ್ತಿನಲ್ಲಿ ಈ ಎರಡೂ ಸೂಕ್ಷ್ಮ ನೆಲೆಗಳು ಅಧಿಕಾರ ರಾಜಕಾರಣದ ಮೇಲಾಟದ ಅಸ್ತ್ರಗಳಾಗಿರುವುದರಿಂದಲೇ, ತಳಮಟ್ಟದಲ್ಲಿ ಜನಸಮುದಾಯಗಳ ನಡುವೆ ಸಾಮಾಜಿಕ-ಸಾಂಸ್ಕೃತಿಕ ಐಕ್ಯತೆಯನ್ನು ಸಾಧಿಸುವುದು ದುಸ್ತರವಾಗುತ್ತಿದೆ. ಆರ್ಥಿಕ ನೆಲೆಯಲ್ಲಿ ಕಾರ್ಪೋರೇಟ್ ಬಂಡವಾಳಶಾಹಿಯ ಕುಣಿಕೆ ಬಿಗಿಯಾಗುತ್ತಿರುವ ವರ್ತಮಾನದ ಸಂದರ್ಭದಲ್ಲಿ ಸಮಾಜದ ತಳಸಮುದಾಯಗಳು, ಶೋಷಿತರು, ಅವಕಾಶವಂಚಿತರು ಮತ್ತು ಅಭಿವೃದ್ಧಿಯ ಚೌಕಟ್ಟಿನಿಂದ ಹೊರಗುಳಿಯುವ ಬೃಹತ್ ಸಂಖ್ಯೆಯ ಸಾಮಾನ್ಯ ಜನರು ತಮ್ಮ ಸಾಂಸ್ಕೃತಿಕ ಬೇಲಿಗಳನ್ನು ತೊಡೆದು, ಸಾಮಾಜಿಕ ಮಡಿವಂತಿಕೆಯನ್ನು ಬದಿಗಿಟ್ಟು, ಮಾರುಕಟ್ಟೆಯ ವಿರುದ್ಧ ಹೋರಾಡಬೇಕಿದೆ.

ಏಕೆಂದರೆ ಮಾರುಕಟ್ಟೆ ಆರ್ಥಿಕತೆ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಮೂಲಕ ಸಾಮಾನ್ಯ ಜನತೆಯ ಬದುಕಿನ ಪ್ರತಿಯೊಂದು ಹೆಜ್ಜೆಯನ್ನೂ ನಿಯಂತ್ರಿಸಲು ಸಜ್ಜಾಗುತ್ತಿದೆ. ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿ, ಕಾರ್ಮಿಕ ಸಂಹಿತೆಗಳು, ಕೃಷಿ ಮತ್ತು ಅರಣ್ಯ ನೀತಿಗಳು ಇದನ್ನೇ ಸೂಚಿಸುತ್ತವೆ. ಆರ್ಥಿಕ ನೆಲೆಯಲ್ಲಿ ಸಕಲ ಸಂಪತ್ತು ಮತ್ತು ಸಂಪನ್ಮೂಲಗಳೂ ಖಾಸಗಿ ವಲಯದ ನಿಯಂತ್ರಣಕ್ಕೆ ಒಳಪಡುತ್ತಿರುವುದರಿಂದ ಸಾಮಾಜಿಕ ಮೇಲ್ ಚಲನೆ, ಸಾಂಸ್ಕೃತಿಕ ಕ್ರಿಯಾಶೀಲತೆ ಮತ್ತು ಆರ್ಥಿಕ ಮುನ್ನಡೆ ಈ ಮೂರೂ ಪ್ರಕ್ರಿಯೆಗಳು ತಮ್ಮ ಸಾರ್ವಭೌಮತ್ವದ ನೆಲೆಗಳನ್ನು ಕಳೆದುಕೊಳ್ಳುತ್ತವೆ. ದುಡಿಮೆಯ ವಲಯದ ಕಾರ್ಪೋರೇಟೀಕರಣದ ಜೊತೆಯಲ್ಲೇ, ಇದರ ಮುಂದುವರೆದ ಭಾಗವಾಗಿ ಶೈಕ್ಷಣಿಕ ವಲಯದಲ್ಲೂ ಮಾರುಕಟ್ಟೆ ತನ್ನದೇ ಆದ ಸಾಂಸ್ಥಿಕ ಏಜೆಂಟರನ್ನು ನೇಮಿಸುತ್ತದೆ. ಈಗಾಗಲೇ ಭಾರತದ ಉತ್ಪಾದನೆಯ ನೆಲೆಗಳೆಲ್ಲವೂ ಖಾಸಗಿ ಪಾಲಾಗಿವೆ. ಸರಕು ಸಾಗಾಣಿಕೆಯ ಹೊಸ ನೀತಿಯನ್ನೂ ಜಾರಿಗೊಳಿಸಲಾಗುತ್ತಿದ್ದು, ವಿಮಾನಯಾನ, ಬಂದರು, ರಸ್ತೆ ಸಾರಿಗೆ ಮತ್ತು ಹಣಕಾಸು ವಲಯಗಳು 2024ರ ವೇಳೆಗೆ ಸಂಪೂರ್ಣವಾಗಿ ಕಾರ್ಪೋರೇಟ್ ಹಿಡಿತದಲ್ಲಿರುತ್ತವೆ.

ಮಾರುಕಟ್ಟೆ ಮತ್ತು ಬಂಡವಾಳದ ಜಗನ್ನಾಥ ರಥಚಕ್ರದಡಿ ಸಿಲುಕುವ ಶ್ರಮಜೀವಿ ವರ್ಗಗಳು ಅಭಿವೃದ್ಧಿಯಿಂದ ವಂಚಿತರಾಗುವುದೇ ಅಲ್ಲದೆ ಸಾಮಾಜಿಕ ಅಸ್ಥಿರತೆಯನ್ನೂ ಎದುರಿಸಲಿವೆ. ಈ ಅಸ್ಥಿರತೆಯಿಂದ ಸಾಮಾನ್ಯ ಜನತೆಯಲ್ಲಿ ಸೃಷ್ಟಿಯಾಗಬಹುದಾದ ಅಸಮಾಧಾನ ಮತ್ತು ಆಕ್ರೋಶಗಳನ್ನು ನಿಯಂತ್ರಿಸುವ ಸಾಧನಗಳನ್ನು ರಾಜಕೀಯ ಪಕ್ಷಗಳು ಜಾತಿ, ಮತಧರ್ಮ ಮತ್ತು ಇತರ ಅಸ್ಮಿತೆಗಳಲ್ಲಿ ಕಂಡುಕೊಳ್ಳುತ್ತವೆ. ಬಂಡವಾಳಶಾಹಿ ಅರ್ಥವ್ಯವಸ್ಥೆ ಸೃಷ್ಟಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸ್ಥಿರತೆಯನ್ನು ಪ್ರಶ್ನಿಸುವ, ವಿರೋಧಿಸುವ ಮತ್ತು ಪ್ರತಿಭಟಿಸುವ ಜನಸಮುದಾಯಗಳ ಹಕ್ಕುಗಳನ್ನು ಹತ್ತಿಕ್ಕುವ ದಮನಕಾರಿ ಆಡಳಿತ ನೀತಿಗಳು ಹೋರಾಟದ ನೆಲೆಗಳನ್ನು ಕ್ರಮೇಣ ನಿಷ್ಕ್ರಿಯಗೊಳಿಸುತ್ತಿರುವುದನ್ನೂ ಈ ಸಂದರ್ಭದಲ್ಲಿ ಗಮನಿಸಬೇಕಿದೆ. ಈ ಅಸ್ಥಿರತೆ ಮತ್ತು ಕಾನೂನು ಭೀತಿಯೇ ಜನರನ್ನು ಮೂಲಭೂತವಾದ ಮತ್ತು ಕೋಮುವಾದದ ಕರಾಳ ಕೂಪಕ್ಕೆ ದೂಡುತ್ತದೆ. ಬಾಹ್ಯ ಜಗತ್ತಿಗಿಂತಲೂ ತಮ್ಮದೇ ಆದ ಜಾತಿ-ಮತಧರ್ಮಗಳ ನೆಲೆಯಲ್ಲಿ ಸಾಂತ್ವನದ ನೆಲೆಗಳನ್ನು ಕಂಡುಕೊಳ್ಳುವ ಅನಿವಾರ್ಯತೆಯನ್ನು ತಳಸಮುದಾಯಗಳೂ ಎದುರಿಸುತ್ತವೆ. ಹಾಗಾಗಿಯೇ ಹಿಂದುತ್ವ, ಹಿಂದೂ ಮೂಲಭೂತವಾದ, ಮುಸ್ಲಿಂ ಮೂಲಭೂತವಾದ ಮತ್ತು ಆಧ್ಯಾತ್ಮಿಕ ಸಾಂಸ್ಥಿಕ ನೆಲೆಗಳು ಹೆಚ್ಚು ಅಪ್ಯಾಯಮಾನವಾಗುತ್ತವೆ. ಭಾರತೀಯ ಸಮಾಜ ಇಂದು ಎದುರಿಸುತ್ತಿರುವ ಸಾಮಾಜಿಕಾರ್ಥಿಕ-ಸಾಂಸ್ಕೃತಿಕ ಸಮಸ್ಯೆಗಳನ್ನು ಈ ತಾತ್ವಿಕ ನೆಲೆಯಲ್ಲಿ ನಿಷ್ಕರ್ಷೆ ಮಾಡದೆ ಹೋದರೆ, ಕಾಂಗ್ರೆಸ್ ಹಮ್ಮಿಕೊಂಡಿರುವ ಭಾರತ್ ಜೋಡೋ ಪಾದಯಾತ್ರೆ ಕೇವಲ ಚುನಾವಣಾ ರಾಜಕಾರಣದ ಒಂದು ಅಸ್ತ್ರವಾಗಿ ಪರ್ಯವಸಾನ ಹೊಂದುತ್ತದೆ. ಈ ಸಮಯದಲ್ಲೇ ರಾಜ್ಯ ಬಿಜೆಪಿ ಜನಸ್ಪಂದನೆ ಯಾತ್ರೆಯನ್ನೂ ಕೈಗೊಂಡಿದೆ.

ಭೌತಿಕವಾಗಿ ಪರಿಭಾವಿಸಲಾಗುವ ಭೌಗೋಳಿಕ 'ದೇಶ' ಮತ್ತು ಆಧ್ಯಾತ್ಮಿಕ ನೆಲೆಯಲ್ಲಿ ಬೌದ್ಧಿಕವಾಗಿ ಕಲ್ಪಿಸಲಾಗುವ 'ಜನ' ಇವರೆಡರ ನಡುವಿನ ತೆಳುಪರದೆಯನ್ನು ಸರಿಸಿ, ಈ ಎರಡೂ ನೆಲೆಗಳನ್ನು ಜೋಡಿಸುವ ಸೂಕ್ಷ್ಮ ತಂತುಗಳನ್ನು ಕಾಪಾಡುವ ಹೊಣೆ ಇಂದು ಸಮಸ್ತ ಭಾರತೀಯರ ಮೇಲಿದೆ. ಭಾರತದ ಪ್ರಜಾತಂತ್ರ ವ್ಯವಸ್ಥೆಗೆ ಆಧಾರಶಿಲೆಯಾಗಿರುವ ಸಂವಿಧಾನ ಮತ್ತು ಸಾಂವಿಧಾನಿಕ ಆಶಯಗಳು ಈ ಎರಡೂ ನೆಲೆಗಳಲ್ಲಿ ಶಿಥಿಲವಾಗುತ್ತಿರುವ ಸಂದರ್ಭದಲ್ಲಿ ಸಾಮಾನ್ಯ ಜನರು ಸ್ಪಂದನೆಯ ಬಾಹುಗಳನ್ನು ಎದುರುನೋಡುತ್ತಿದ್ದಾರೆ. ಶತಮಾನಗಳ ಕಾಲ ಹಲವು ಪೀಳಿಗೆಗಳ ಮೂಲಕ ಮತ್ತು ಸಮಕಾಲೀನ ಭಾರತದ 75 ವಸಂತಗಳ ಮೂಲಕ ಕಟ್ಟಿ ಬೆಳೆಸಿರುವ ಒಂದು ದೇಶವನ್ನು ಈ ಸಂವಿಧಾನದ ಆಶಯದಂತೆ ಸಂರಕ್ಷಿಸುವ ಗುರುತರ ಜವಾಬ್ದಾರಿಯನ್ನು ಹೊತ್ತ ಒಂದು ಜನಸಮೂಹ, ಸೋದರತೆ, ಸಮಾನತೆ, ಸಮನ್ವಯತೆ, ಸೌಹಾರ್ದತೆ, ಮಾನವೀಯತೆ, ಸಂವೇದನೆ ಮತ್ತು ಮಾನವೀಯ ಮೌಲ್ಯಗಳಿಗಾಗಿ ಪರಿತಪಿಸುವಂತಹ ಪರಿಸ್ಥಿತಿಯನ್ನು ಅಧಿಕಾರದ ಶಕ್ತಿ ಕೇಂದ್ರಗಳು ನಿರ್ಮಿಸಿಬಿಟ್ಟಿವೆ. ಇಂದು ಈ ಅಧಿಕಾರ ಕೇಂದ್ರಗಳೇ ತಮ್ಮದೇ ಆದ

ಅಸ್ತಿತ್ವಕ್ಕಾಗಿ ಭಾರತವನ್ನು ಜೋಡಿಸಲು ಮತ್ತು ಭಾರತಕ್ಕೆ ಸ್ಪಂದಿಸಲು ಪೈಪೋಟಿ ನಡೆಸುತ್ತಿವೆ.

ಯಾರನ್ನು ಜೋಡಿಸಬೇಕು? ಯಾರಿಗೆ ಸ್ಪಂದಿಸಬೇಕು? ತನ್ನ 75ನೆಯ ವಸಂತದಲ್ಲಿ ಸ್ವತಂತ್ರ ಭಾರತದ ಬಹುಸಂಖ್ಯಾತ ಜನರು ಪರಸ್ಪರ ವಿಶ್ವಾಸದೊಂದಿಗೆ, ಪ್ರೀತ್ಯಾದರಗಳೊಂದಿಗೆ ಬದುಕುತ್ತಿದ್ದರೂ, ಮಾನವೀಯ ಸ್ಪಂದನೆಗಾಗಿ ಹಾತೊರೆಯುವ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ವ್ಯಕ್ತಿಗತ ನೆಲೆಯಲ್ಲಿ ಮಾನವ ಸಂಬಂಧಗಳನ್ನು ಗಟ್ಟಿಗೊಳಿಸುತ್ತಿರುವ ಒಂದು ಸಮಾಜವನ್ನು ಜಾತಿ ಮತಗಳ ನೆಲೆಯಲ್ಲಿ ವಿಘಟನೆಗೊಳಪಡಿಸುತ್ತಿರುವ ಅಧಿಕಾರದ ಶಕ್ತಿ ಕೇಂದ್ರಗಳು ಈ ಮಾನವೀಯ ಸ್ಪಂದನೆಗೆ ಅಗತ್ಯವಾದ ಎಲ್ಲ ಬೌದ್ಧಿಕ-ಸಾಂಸ್ಕೃತಿಕ ನೆಲೆಗಳನ್ನೂ ನಾಶಪಡಿಸುತ್ತಲೇ ಬಂದಿವೆ.

ಭಾರತವನ್ನು ಜೋಡಿಸುವ ಮತ್ತು ಜನತೆಗೆ ಸ್ಪಂದಿಸುವ ರಾಜಕೀಯ ಕೈಗಳು ಈ ಭಗ್ನ ನೆಲೆಗಳನ್ನು ಮತ್ತಷ್ಟು ಶಿಥಿಲಗೊಳಿಸುವ ಪ್ರಯತ್ನದಲ್ಲಿವೆ. ಹಾಗಾಗಿಯೇ ಸಾಂಸ್ಕೃತಿಕ ಶಕ್ತಿ ಕೇಂದ್ರದಿಂದ ದೌರ್ಜನ್ಯಕ್ಕೊಳಗಾದ ಅಮಾಯಕ ಹೆಣ್ಣುಮಕ್ಕಳು ಇಂದು ತಮ್ಮ ನೋವಿಗೆ ಸ್ಪಂದಿಸುವವರು ಯಾರೂ ಇಲ್ಲವೇ ಎಂದು ಪರಿತಪಿಸುವಂತಾಗಿದೆ. ಇದು ಕೇವಲ ಮುರುಘಾಮಠಕ್ಕೆ ಸೀಮಿತವಾದ ವಿದ್ಯಮಾನವಲ್ಲ. ಕಾಶ್ಮೀರದ ಕಥುವಾದಿಂದ ಚಿತ್ರದುರ್ಗದವರೆಗೂ ವಿಸ್ತರಿಸುವ ಒಂದು ಕರಾಳ ನೆರಳು ಎನ್ನುವುದನ್ನು ಗಮನಿಸಬೇಕಿದೆ.

ತನ್ನ ಕಳೆದುಕೊಂಡ ನೆಲೆಯನ್ನು ಮರುಶೋಧಿಸಲು 3500 ಕಿಲೋಮೀಟರ್ ಉದ್ದದ ಭಾರತ್ ಜೋಡೋ ಯಾತ್ರೆಯನ್ನು ಕೈಗೊಂಡಿರುವ ಕಾಂಗ್ರೆಸ್ 2024ರ ಚುನಾವಣೆಯ ವೇಳೆಗೆ ಪುಟಿದೇಳುವ ಹುರುಪಿನಲ್ಲಿ ಮುನ್ನಡೆದಿದೆ. ಕಳೆದ ಎಂಟು ವರ್ಷಗಳಲ್ಲಿ ಮೊದಲ ಬಾರಿ ಕಾಂಗ್ರೆಸ್ ಪಕ್ಷ ತಳಮಟ್ಟದ ಜನರನ್ನು ಸಂಪರ್ಕಿಸಬೇಕಾದ ಅನಿವಾರ್ಯತೆಯನ್ನು ಮನಗಂಡಿರುವುದು ಸ್ವಾಗತಾರ್ಹವೇ. ಹಾಗೆಯೇ ಕೋಮುವಾದ, ಮತಾಂಧತೆ, ದ್ವೇಷ ರಾಜಕಾರಣ ಮತ್ತು ಸಾಂಸ್ಕೃತಿಕ ವಿಕೃತಿಗಳಿಂದ ಜರ್ಝರಿತವಾಗಿರುವ ಭಾರತದ ಸಾಮಾಜಿಕ ನೆಲೆಗಳನ್ನು ಮರುಜೋಡಿಸುವ ಪ್ರಯತ್ನವೂ ಸ್ತುತ್ಯಾರ್ಹವೇ.

ಈ ಜೋಡಣೆಯ ಯಾತ್ರೆಯಲ್ಲಿ ಕಾಂಗ್ರೆಸ್ ಪಕ್ಷ ತನ್ನ ಕಾರ್ಯಕರ್ತರನ್ನು ಬಡಿದೆಬ್ಬಿಸುವುದರೊಂದಿಗೇ, ಮತದಾರ ಪ್ರಭುಗಳನ್ನು ಪುನರ್ ಸಂಪರ್ಕಿಸುವ ರಾಜಕೀಯ ಮಹತ್ವಾಕಾಂಕ್ಷೆಯನ್ನೂ ಹೊಂದಿದೆ. ಇದರ ಸಾಫಲ್ಯ ವೈಫಲ್ಯಗಳನ್ನು ಬದಿಗಿಟ್ಟು ನೋಡುವುದಾದರೆ, ಕಾಂಗ್ರೆಸ್ ಪಕ್ಷದ ನಾಯಕರಿಗೆ ತಾವು ಏನನ್ನು ಜೋಡಿಸಲು ಯತ್ನಿಸುತ್ತಿದ್ದೇವೆ ಎಂಬ ಪರಿವೆ ಅವಶ್ಯವಾಗಿ ಇರಬೇಕಾಗಿದೆ. ಹಿಂದಿ ಹೇರಿಕೆಯ ಭಾಷಿಕ ಅಧಿಪತ್ಯ, ಹಿಂದುತ್ವವಾದಿ ರಾಜಕಾರಣದ ಮತಧಾರ್ಮಿಕ ಅಧಿಪತ್ಯ ಮತ್ತು ತತ್ಸಂಬಂಧಿ ಸಾಂಸ್ಕೃತಿಕ ಅಧಿಪತ್ಯವು ಭಾರತೀಯ ಸಮಾಜದಲ್ಲಿ ನಿರ್ಮಿಸುತ್ತಿರುವ ಬೇಲಿಗಳನ್ನು ಭೇದಿಸಿ, ಜನಸಾಮಾನ್ಯರನ್ನು ಸಂವಿಧಾನದ ಸೋದರತೆಯ ಆಶಯದಂತೆ ಜೋಡಿಸುವುದು ಕಾಂಗ್ರೆಸ್ ನಾಯಕರ ಆದ್ಯತೆಯಾಗಬೇಕಿದೆ.

ಜೋಡಣೆ ಮತ್ತು ಸ್ಪಂದನೆ ಎರಡೂ ಸಹ ಚುನಾವಣಾ ರಾಜಕಾರಣ ಮತ್ತು ಮತಗಟ್ಟೆಗಳ ಚೌಕಟ್ಟಿನಿಂದ ಹೊರಬಂದಾಗ, ನಮ್ಮ ಅಧಿಕಾರ ಶಕ್ತಿ ಕೇಂದ್ರಗಳಿಗೆ ಈ ಎರಡೂ ಪದಗಳ ಅಂತಃಸತ್ವವೂ ಅರ್ಥವಾಗುತ್ತದೆ. ದಿನನಿತ್ಯ ಅತ್ಯಾಚಾರ ಮತ್ತು ದೌರ್ಜನ್ಯಕ್ಕೊಳಗಾಗುತ್ತಿರುವ ಅಸಂಖ್ಯಾತ ಹೆಣ್ಣುಮಕ್ಕಳು ಪುರುಷ ಸಮಾಜದ ಅನುಕಂಪ ಅಥವಾ ಅನುಭೂತಿಯನ್ನು ನಿರೀಕ್ಷಿಸುವುದಿಲ್ಲ. ಬೆನ್ನು ನೇವರಿಸುವ ಸಾಂತ್ವನವನ್ನೂ ನಿರೀಕ್ಷಿಸುವುದಿಲ್ಲ.

**ಜೋಡಣೆ ಮತ್ತು ಸ್ಪಂದನೆ ಎರಡೂ ಸಹ ಚುನಾವಣಾ ರಾಜಕಾರಣ ಮತ್ತು ಮತಗಟ್ಟೆಗಳ ಚೌಕಟ್ಟಿನಿಂದ ಹೊರಬಂದಾಗ, ನಮ್ಮ ಅಧಿಕಾರ ಶಕ್ತಿ ಕೇಂದ್ರಗಳಿಗೆ ಈ ಎರಡೂ ಪದಗಳ ಅಂತಃಸತ್ವವೂ ಅರ್ಥವಾಗುತ್ತದೆ.**

ಪುರುಷಾಧಿಪತ್ಯದ ದಬ್ಬಾಳಿಕೆಗೆ ಬಲಿಯಾಗುವ ಈ ಎಳೆ ಮನಸುಗಳಿಗೆ 'ಸಂತ್ರಸ್ತ' ಪದವಿಯನ್ನು ನೀಡುವ ಮೂಲಕ ಸಹಾನುಭೂತಿ ವ್ಯಕ್ತಪಡಿಸುವ ಸಮಾಜ, ಈ ಪದವಿಗೆ ಕಾರಣರಾದವರನ್ನು ಶಿಕ್ಷೆಗೊಳಪಡಿಸದೆ ಹೋದರೆ ಇವರು ಶಾಶ್ವತ ಸಂತ್ರಸ್ತರಾಗಿಬಿಡುತ್ತಾರೆ. ಅಪರಾಧ ಅಥವಾ ಪಾತಕ ಕೃತ್ಯಗಳನ್ನು ದೌರ್ಜನ್ಯಕ್ಕೊಳಗಾದವರ ನೆಲೆಯಲ್ಲಿ ನಿಂತು ನೋಡದೆ, ಪಾತಕಿಗಳ ನೆಲೆಯಲ್ಲಿ ನಿಂತು ನೋಡುವ ಒಂದು ವಿಕೃತ ಪರಂಪರೆಯನ್ನು ನಾವು ನಮ್ಮದಾಗಿಸಿಕೊಂಡಿದ್ದೇವೆ. ಹಾಗಾಗಿಯೇ ಪ್ರಭಾವಿ ವಲಯದ 'ಪಾತಕಿಗಳು' ತಮ್ಮ ಸಾಮಾಜಿಕ-ಸಾಂಸ್ಕೃತಿಕ-ಆರ್ಥಿಕ ಸ್ಥಾನಮಾನಗಳಿಗನುಗುಣವಾಗಿ 'ನಿರಪರಾಧಿ' ಪಟ್ಟವನ್ನು ಗಳಿಸಿಬಿಡುತ್ತಾರೆ. ಆಳುವ ವರ್ಗಗಳ 'ಜನಸ್ಪಂದನೆ'ಯನ್ನು ಈ ನೆಲೆಯಲ್ಲಿ ನಿಷ್ಕರ್ಷೆಗೊಳಪಡಿಸಬೇಕಿದೆ.

ಭಾರತವನ್ನು ಜೋಡಿಸುವ ಮತ್ತು ಜನತೆಗೆ ಸ್ಪಂದಿಸುವ ರಾಜಕೀಯ ಶಕ್ತಿಗಳು ಮನಸುಗಳನ್ನೂ ಜೋಡಿಸುತ್ತಲೇ, ಹೃದಯಗಳಿಗೆ ಸ್ಪಂದಿಸಬೇಕಿದೆ. ಈ ಮನಸು ಹೃದಯಗಳ ನಡುವೆ ನಿರ್ಮಿಸಲಾಗುತ್ತಿರುವ ಜಾತಿ, ಧರ್ಮಗಳ ತಡೆಗೋಡೆಗಳು ಮತ್ತು ಇವುಗಳ ನಡುವೆ ಬಿತ್ತಲಾಗುತ್ತಿರುವ ಮತದ್ವೇಷದ ಬೀಜಗಳನ್ನು ತೊಡೆದುಹಾಕಲು ಮುಂದಾಗಬೇಕಿದೆ. ಸೂರ್ಯ, ಚಂದ್ರ, ನೆಲ, ಜಲ ಮತ್ತು ಬ್ರಹ್ಮಾಂಡದ ಚರಾಚರಗಳನ್ನು ಒಂದು ಪ್ರತಿಮೆಯ ರೂಪದಲ್ಲಿ, ರೂಪಕವಾಗಿ ಬಳಸಿಕೊಳ್ಳುವ ಸೃಜನಶೀಲತೆಯ ಮಾರ್ಗಗಳು ಶಿಥಿಲ ವಾಗುತ್ತಿರುವುದನ್ನೂ ಈ ಸಂದರ್ಭದಲ್ಲಿ ಗಮನಿಸಬೇಕಿದೆ.

ಈ ಸಾಂಸ್ಕೃತಿಕ ವಿಘಟನೆಯನ್ನು ತಪ್ಪಿಸಬೇಕೆಂದರೆ, ತಳಮಟ್ಟದವರೆಗೂ ಮನಸುಗಳನ್ನು ಜೋಡಿಸಬೇಕಿದೆ.

ತುಳಿತಕ್ಕೊಳಗಾದ ನಿರ್ಲಕ್ಷಿತ ಸಮುದಾಯಗಳ ಎದೆಬಡಿತಕ್ಕೆ ಸ್ಪಂದಿಸಬೇಕಿದೆ. ಜನತಂತ್ರದಲ್ಲಿ 'ಜನ', ಗಣತಂತ್ರದಲ್ಲಿ 'ಗಣ' ಮತ್ತು ಪ್ರಜಾಪ್ರಭುತ್ವದಲ್ಲಿ 'ಪ್ರಜೆ' ಸದಾ ಉತ್ಸುಕತೆಯಿಂದ, ಜೀವಂತಿಕೆಯಿಂದ ಇರಬೇಕೆಂದರೆ ಈ 'ಮನಸುಗಳ ಜೋಡಣೆ ' ಮತ್ತು 'ಹೃದಯ ಸ್ಪಂದನೆ' ಮುಖ್ಯವಾದ ಮಾರ್ಗಗಳಾಗುತ್ತವೆ.

ಈ ಮೂರನ್ನೂ ನಿರ್ಲಕ್ಷಿಸುವ ಅಧಿಕಾರದ ಶಕ್ತಿ ಕೇಂದ್ರಗಳು ಎಲ್ಲವನ್ನೂ ಕಾರ್ಪೋರೇಟ್ ಮಾರುಕಟ್ಟೆಯ ಕಚ್ಚಾವಸ್ತುಗಳಂತೆ ಪರಿಗಣಿಸುತ್ತಿವೆ. ಮತಗಟ್ಟೆಗಳಿಂದಾಚೆಗೂ ಒಂದು ಸಮಾಜ ಜೀವಂತಿಕೆಯಿಂದಿರಬೇಕು ಎಂಬ ವಾಸ್ತವವನ್ನು ರಾಜಕೀಯ ಪಕ್ಷಗಳು ಗ್ರಹಿಸುವಂತಾದರೆ 'ಭಾರತ್ ಜೋಡೋ' ಮತ್ತು 'ಜನಸ್ಪಂದನೆ' ಯಂತಹ ಯಾತ್ರೆ-ಸಮಾವೇಶಗಳು ಸಾರ್ಥಕವಾಗುತ್ತವೆ. ಅಸಹಾಯಕತೆಯಿಂದ ನ್ಯಾಯಾಂಗದ ಮುಂದೆ ಕೈಚಾಚಿ ನಿಂತಿರುವ ಅಸಂಖ್ಯಾತ ನಿಸ್ಪೃಹ ಜೀವಿಗಳತ್ತ ಒಮ್ಮೆಯಾದರೂ ಕಣ್ಣೆತ್ತಿ ನೋಡುವ ವಿವೇಕ ಮತ್ತು ವಿವೇಚನೆಯನ್ನು ನಮ್ಮ ರಾಜಕೀಯ ಪಕ್ಷಗಳು ಬೆಳೆಸಿಕೊಳ್ಳಬೇಕಿದೆ. ಆಗ ಮಾತ್ರವೇ ಜನತಂತ್ರ ಮತ್ತು ಗಣತಂತ್ರ ಸಾರ್ಥಕತೆಯನ್ನು ಪಡೆಯುತ್ತದೆ.

★ **ನಾ ದಿವಾಕರ್**

# ಅಡವಿ ತಾಯಿ



— ಕೋಟಿಗಾನಹಳ್ಳಿ ರಾಮಯ್ಯ

ಅಡವಿ ತಾಯಿಗೆ ವಂದನೆ ನಮ್ಮ ತಾಯಿ ಅಡವಿಗೆ ವಂದನೆ...
ಅಡವಿ ತನ್ನಾಗಿದ್ರೆ ಅನ್ನಕ್ಕೆ ಕೊರತೆಯಿಲ್ಲ
ಬೆಲೆಯೂ ಹಟ್ಟಿಗೆ ಬಂದ್ರೆ ಹಬ್ಬವ ಮಾಡೋಣ

ಬೆಟ್ಟ ಗುಡ್ಡಗಳ ನಟ್ಟನಡುವೆ ಗೋದಾವರಿಯು ಹರಿದಾಳೆ ನೋಡು
ಅಂಕುಡೊಂಕಾಗಿ ವೈಯ್ಯಾರದಿಂದ ಕಾವೇರಿತಾಯಿ ಹರಿದಾಳೆ ನೋಡು
ಹೊಳೆತೀರದ ಬಗ್ಗೆ ನೋಡು ತಿಳಿನೀರ ಕೊಲವನೊಡು
ಜೀವನದಿಗಳು ಸುತ್ತು ಗಟ್ಟಿದ ಅಡವಿ ತಾಯಿಯ ಅಂದವನೋಡು

ಕೂಹು... ಕೂಹು... ಕೂಹು... ಎನ್ನುವ ಕೋಗಿಲೆಯ ಹಾಡು
ಕಿಲ ಕಿಲ ಕಿಲ ಕಿಲ ಎನ್ನುವ ಗಿಳಿ ಹಿಂದಿನ ಕಲರವ
ಪಾರಿವಾಳ ಜೋಡಿ ನೋಡು ಹಾರೋ ಹಕ್ಕಿ ಹಾಡು ಕೇಳು
ಎಲ್ಲರಾಬದುಕಿಗೆ ನೆರಳಾಗಿನಿಂತ ಅಡವಿ ತಾಯಿಯ ಅಂದವನೋಡು

ಕಾಡುಕೋಣಗಳ ಜಿಂಕೆ ಹಿಂದೂಗಳ ಓಟದ ನೋಟ ಹೇಗಿದೆ ನೋಡು
ಆನೆ ಹಿಂದೂಗಳ ಹುಲಿ ಚಿರತೆಯ ಎದೆ ನಡುಗಿಸುವ ಘರ್ಜನೆ ಕೇಳು
ನವಿಲು ಹಿಂದೂ ನಾಟ್ಯ ನೋಡು ಜಿಂಕೆ ಜಿಗಿವ ಚಂದ ನೋಡು
ಎಲ್ಲರ ಬದುಕಿಗೆ ನೆರಳಾಗಿನಿಂತ ಅಡವಿ ತಾಯಿಯ ಅಂದವನೋಡು

ಬಂಡೆಗಳೊದ್ದು ಬೆಟ್ಟ ನುಂಗುವ ಹೆಬ್ಬಾವುಗಳ ಕೋರಿಯ ನೋಡು
ಬುಸುಗುಟ್ಟುವ ವಿಷ ಕಕ್ಕುವ ಕಾಳಿಂಗ ಸರ್ಪದ ನೋಟವ ನೋಡು
ನಾಗಾರಾ ಹೆಡೆಯ ನೋಡು ಪಟ್ಟೆ ಹಾವು ಪಟ್ಟೆ ನೋಡು
ಹಾವುಮಾನವ ಕೋಡಿಬಾಳುವ ಅಡವಿ ತಾಯಿಯ ಗುಂಡಿಗೆ ನೋಡು

ಭೀಮದೇವರ ಜಾಲಿದೇವರ ತಾಯಿನಮ್ಮಮ್ಮ ಜಂಗುಬಾಯಮ್ಮ
ನಮ್ಮ ಮಕ್ಕಳ ಮರಿಗಳ ನೀನು ತಣ್ಣಗೆ ಕಾಪಾಡು ತಾಯಿ ನಮ್ಮವ್ವ
ಈಚಲು ಹೆಂಡ ತಂದು ಧಾರೆಯೆರೆವೆವು ತಾಯಿ
ಕೋರಿದಕೋಬ್ಬಿದ ಹುಂಜವತಂದು ಕುಯ್ದುಹಾರ ಕೊಡುವೆವು ತಾಯಿ
ಯಾರಿಗೂ ತಲೆಬಾಗೆವು ತಲೆಬಾಗೆವು ಯಾತಕು ಭಯಪಡೆವು ಭಯಪಡೆವು
ಈ ನಾಡ ಮಣ್ಣಿನ ಒಕ್ಕಲು ನಾವು ದಲಿತ ಸಂಘದ ಮಕ್ಕಳು ನಾವು.

# ಬೆಂಗಳೂರಿನ ಮಳೆ ಮತ್ತು ಕಾರ್ಮಿಕರು ಅನುಭವಿಸಿದ ಸಮಸ್ಯೆಗಳು

ಕಳೆದ ಹಲವು ತಿಂಗಳಲ್ಲಿ ಬೆಂಗಳೂರಿನಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ, ಬೆವರ ಸುರಿಸಿ ದುಡಿಯುವವರ ಮನೆಗಳು ಮುಳುಗಡೆಯಾಗಿದ್ದವು ಮತ್ತು ಅವರ ಕುಟುಂಬಗಳು ಸಂಕಷ್ಟದಲ್ಲಿದ್ದವು. ಕೆರೆಗಳು ಮತ್ತು ರಾಜಕಾಲುವೆಗಳನ್ನು ಅತಿಕ್ರಮಣ ಮಾಡಿರುವುದರಿಂದ, ಸೂಕ್ತ ನಗರ ನಿರ್ಮಾಣ ಯೋಜನೆ ಇಲ್ಲದಿರುವುದರಿಂದ, ಎಸ್‌ಟಿಪಿಗಳ ಕೊರತೆಯಿಂದ ಮತ್ತು ಅಪಾರ್ಟ್‌ಮೆಂಟ್‌ಗಳು ತಮ್ಮ ಆವರಣದಿಂದ ಹತ್ತಿರದಲ್ಲಿ ವಾಸಿಸುವ ಬಡ ಕಾರ್ಮಿಕ ವರ್ಗದ ಪ್ರದೇಶಗಳಿಗೆ ನೀರನ್ನು ಪಂಪ್ ಮಾಡುವುದರಿಂದಾಗಿ ಬೆಂಗಳೂರಿನ ಕಾರ್ಮಿಕ ವರ್ಗ ವಾಸಿಸುವ ಪ್ರದೇಶಗಳು ಜಲಾವೃತಗೊಂಡಿವೆ. ಈ ಕಾರ್ಮಿಕರ ಸಂಕಷ್ಟದ ಸ್ಥಿತಿಗೆ ಬಿಬಿಎಂಪಿಯಾಗಲೀ, ರಾಜ್ಯ ಸರ್ಕಾರದ ಅಧಿಕಾರಿಗಳಾಗಲೀ ನಮ್ಮ ಸಂಘಟನೆಯ ಹೋರಾಟ ಮಾಡುವ ತನಕ ಸ್ಪಂದಿಸಲಿಲ್ಲ.

ಎಡೆಬಿಡದೆ ಸುರಿಯುತ್ತಿರುವ ಭಾರಿ ಮಳೆಯಿಂದ ಬಿಬಿಎಂಪಿಯ ಮಹದೇವಪುರ ವಲಯದ ವ್ಯಾಪ್ತಿಯಲ್ಲಿ ಬರುವ ಬೆಳ್ಳಂದೂರು, ಮುನೆಕೊಳಲು, ಬ್ರೂಕ್‌ಫೀಲ್ಡ್, ದೊಡ್ಡನೆಕ್ಕುಂದಿ ಮತ್ತು ಕೊಡಿಗೇಹಳ್ಳಿ ಪ್ರದೇಶಗಳು ಹೆಚ್ಚು ಹಾನಿಗೊಳಗಾಗಿವೆ. ಈ ಪ್ರದೇಶಗಳಲ್ಲಿ ವಾಸಿಸುವ ಕಾರ್ಮಿಕರು ಪ್ರಧಾನವಾಗಿ ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿದ್ದಾರೆ, ಅವರಲ್ಲಿ ಪೌರಕಾರ್ಮಿಕರು, ಆಟೋ ಚಾಲಕರು/ಸಹಾಯಕರು, ಚಿಂದಿ ಆಯುವವರು, ಇವರೆಲ್ಲಾರು ನಮ್ಮ ನಗರವನ್ನು ಸ್ವಚ್ಛವಾಗಿಡುವಲ್ಲಿ ಗಣನೀಯ ಕೊಡುಗೆ ನೀಡುತ್ತಾರೆ. ಆದಾಗ್ಯೂ, ಅವರ ಅವಸ್ಥೆಗೆ ಪರಿಹಾರ ಒದಗಿಸದೇ, ತಿರಸ್ಕಾರದಿಂದ ನೋಡಲಾಗುತ್ತಿದೆ.

ಈ ಪ್ರದೇಶಗಳಲ್ಲಿ ಉಂಟಾಗಿರುವ ಸಂಕಷ್ಟದ ಪರಿಸ್ಥಿತಿಗೆ ಸಂಬಂಧಿಸಿದಂತೆ ಬಿಬಿಎಂಪಿ ಅಧಿಕಾರಿಗಳಿಗೆ ಹಲವಾರು ದೂರುಗಳನ್ನು ಸಲ್ಲಿಸಲಾಗಿದ್ದು ಮತ್ತು ಕಾರ್ಮಿಕರಿಗೆ ತಾತ್ಕಾಲಿಕ ಆಶ್ರಯ ವ್ಯವಸ್ಥೆ, ಉಚಿತ ಪಡಿತರ, ಬೆಡ್‌ಶೀಟ್, ಬಟ್ಟೆ ಸೇರಿದಂತೆ ಇತರ ಸೌಲಭ್ಯಗಳನ್ನು ಒದಗಿಸುವಂತೆ ಮತ್ತು ಮುಳುಗಡೆಗೊಂಡಿರುವ ಬಡಕಾರ್ಮಿಕರ ಮನೆಯ ವಸ್ತುಗಳು, ಎಲೆಕ್ಟ್ರಾನಿಕ್ ವಸ್ತುಗಳು, ದ್ವಿಚಕ್ರ ವಾಹನಗಳು, ಆಹಾರ ಪದಾರ್ಥಗಳು, ಪಾತ್ರೆಗಳು, ಬಟ್ಟೆಗಳು, ಇತ್ಯಾದಿ ಎಲ್ಲಾ ನಷ್ಟಕ್ಕೆ ಪರಿಹಾರವನ್ನು ನೀಡುವಂತೆ ಪಕ್ಷದ ವತಿಯಿಂದ ಒತ್ತಾಯಿಸಲಾಗಿದೆ. ಅನೇಕ ಸಂದರ್ಭಗಳಲ್ಲಿ, ಕಾರ್ಮಿಕ ವರ್ಗ ವಾಸವಾಗಿರುವ ಪ್ರದೇಶಗಳು ಮುಳುಗಡೆಯಾಗಿರುವುದು ಹತ್ತಿರದ ಅಪಾರ್ಟ್‌ಮೆಂಟ್ ಸಂಕೀರ್ಣಗಳ ಕೆಟ್ಟ ಧೋರಣೆಯಿಂದಾಗಿ, ಈ ಕಾರ್ಮಿಕರು ಸಾಕಷ್ಟು ಬಾರಿ ಮನವಿ ಮಾಡಿಕೊಂಡ ಹೊರತಾಗಿಯೂ, ತಮ್ಮ ಎಸ್‌ಟಿಪಿಗಳು ಸೇರಿದಂತೆ ತಮ್ಮ ಆವರಣದಲ್ಲಿ ತುಂಬಿರುವ ನೀರನ್ನು ಹತ್ತಿರದ ಕಾರ್ಮಿಕ ವರ್ಗದ ಪ್ರದೇಶಗಳಿಗೆ ಪಂಪ್ ಮಾಡುತ್ತಿದ್ದಾರೆ, ಇದರಿಂದಾಗಿ ಕಾರ್ಮಿಕ ವರ್ಗದ ಕುಟುಂಬಗಳಿಗೆ ತೀವ್ರ ತೊಂದರೆ ಉಂಟಾಗುತ್ತದೆ. ಆದರೆ, ಸ್ಥಳೀಯ ಆಡಳಿತ ಮಂಡಳಿ ಈ ತಪ್ಪಿತಸ್ಥ ಅಪಾರ್ಟ್‌ಮೆಂಟ್‌ಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ.

ಬೆಂಗಳೂರಿನಲ್ಲಿ ಮಳೆಯಿಂದ ಹಾನಿಗೊಳಗಾದ ಎಲ್ಲಾ ನಿವಾಸಿಗಳಿಗೆ ರಾಜ್ಯ ಸರ್ಕಾರವು ತಕ್ಷಣವೇ ಪರಿಹಾರ ಪ್ಯಾಕೇಜ್‌ಗಳನ್ನು ಘೋಷಿಸಬೇಕು ಎಂದು ನಾವು ಒತ್ತಾಯಿಸಿದ್ದೇವೆ.

1. ಉಚಿತ ಆಹಾರ ಪಾದರ್ಥಗಳು, ಬಟ್ಟೆಗಳು, ಬೆಡ್‌ಶೀಟ್‌ಗಳು, ಹಾಸಿಗೆಗಳು ಮುಂತಾದ ಮೂಲಭೂತ ಸೌಕರ್ಯಗಳೊಂದಿಗೆ ತಕ್ಷಣಕ್ಕೆ ಆಶ್ರಿತ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು.
2. ಪೌಷ್ಟಿಕಾಂಶ ಮತ್ತು ಇತರ ಅಗತ್ಯತೆಗಳು ಅವಶ್ಯಕವಾರುವ ಮಕ್ಕಳು, ಗರ್ಭಿಣಿಯರು, ಚಿಕ್ಕ ಮಕ್ಕಳಿರುವ ತಾಯಂದಿರು, ಹಿರಿಯ ನಾಗರಿಕರು, ವಿಕಲಚೇತನರು ಸೇರಿದಂತೆ ಮುಂತಾದವರ ಕುರಿತು ವಿಶೇಷ ಕಾಳಜಿಯನ್ನು ತೆಗೆದುಕೊಳ್ಳಬೇಕು.
3. ಆಶ್ರಿತ ಕೇಂದ್ರಗಳಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸಬೇಕು
4. ಬಿಬಿಎಂಪಿ/ರಾಜ್ಯ ಸರ್ಕಾರವು ನಷ್ಟಕ್ಕೊಳಗಾದ ಕುಟುಂಬಗಳಿಗೆ ತಮ್ಮ ಮನೆಗಳನ್ನು ಮರುನಿರ್ಮಾಣ ಮಾಡಲು ಹಣಕಾಸಿನ ನೆರವು ನೀಡಬೇಕು ಮತ್ತು ನಾಶವಾಗಿರುವ ಗೃಹೋಪಯೋಗಿ ವಸ್ತುಗಳ (ಎಲೆಕ್ಟ್ರಾನಿಕ್ ವಸ್ತುಗಳು, ದ್ವಿಚಕ್ರ ವಾಹನಗಳು, ಬಟ್ಟೆ, ಪಡಿತರ ಇತ್ಯಾದಿ) ನಷ್ಟವನ್ನು ತುಂಬಿಕೊಡಬೇಕು.
5. ಪ್ರತಿ ಕುಟುಂಬಕ್ಕೆ ತಕ್ಷಣದ ಪರಿಹಾರವಾಗಿ ರೂ. 50,000/-ವನ್ನು ನೀಡಬೇಕು.
6. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು 2005 ರ ವಿಪತ್ತು ನಿರ್ವಹಣಾ ಕಾಯಿದೆಯ ಸೆಕ್ಷನ್ 19 ರ ಅಡಿಯಲ್ಲಿ "ತಕ್ಷಣದ ಪರಿಹಾರಕ್ಕಾಗಿ ಮಾರ್ಗಸೂಚಿಗಳನ್ನು" ತಕ್ಷಣವೇ ಘೋಷಿಸಬೇಕು, ಜೊತೆಗೆ ಆಗಿರುವ ಎಲ್ಲಾ ನಷ್ಟಗಳಿಗೆ ಪರಿಹಾರವನ್ನು ಒದಗಿಸಬೇಕು.
7. ಪೌರಕಾರ್ಮಿಕರು, ಆಟೋ ಚಾಲಕರು/ಸಹಾಯಕರು, ಚಿಂದಿ ಆಯುವವರು, ಕಟ್ಟಡ ಕಾರ್ಮಿಕರು, ಗೃಹ ಕಾರ್ಮಿಕರು, ಎಲ್ಲಾ ದಿನಗೂಲಿ ನೌಕರರು ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಉಚಿತ ಮನೆ-ನಿವೇಶನ ಹಂಚಿಕೆ ಮಾಡಬೇಕು ಮತ್ತು ಅವರಿಗೆ ಗೃಹ ಭಾಗ್ಯ ಯೋಜನೆಯನ್ನು ವಿಸ್ತರಿಸಬೇಕು. ★



# ನಮ್ಮ ಸಾಮೂಹಿಕ ಸಂಘಟನೆಗಳಿಂದ ನಡೆಸಿದ 'ರಿಲೀಫ್' ಕೆಲಸಗಳು


















Kannada Liberation | Monthly Publication
RNI No. KARKAN/2002/07847
Posting at Bengaluru, Karnataka

# ನಮ್ಮ ಕಾರ್ಯಕ್ರಮಗಳು







ಬೆಂಗಳೂರಿನ ಆನಂದಪುರದಲ್ಲಿ ದಿನಾಂಕ 29.09.2022ರಂದು AICCTU-RYA ಪ್ರಾದೇಶಿಕ ಕಚೇರಿಯ ಉದ್ಘಾಟನೆ ನಡೆಯಿತು.





ಮಂಗಳೂರಿನ ಕರ್ನಾಟಕ ಪ್ರಗತಿಪರ ಆಟೋ ಚಾಲಕರ ಸಂಘ (AICCTU ಸಂಯೋಜಿತ) ರೈಲ್ವೆ ನಿಲ್ದಾಣಗಳಲ್ಲಿ ಪ್ರಿ-ಪೇಡ ಆಟೋ ಕೌಂಟರ್ ಗಳಲ್ಲಿ ಆಟೋ ಚಾಲಕರ ಮೇಲೆ ಹೆಚ್ಚುವರಿ ಶುಲ್ಕವನ್ನು ಹೇರಿದ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಮತ್ತು ರೈಲ್ವೆ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.






ದಿನಾಂಕ 19.10.2022ರಂದು ಧಾರವಾಡ ಜಿಲ್ಲೆಯ ಕೊಳಿಕೆರೆಯಲ್ಲಿ ಕರ್ನಾಟಕ ಪ್ರಗತಿಪರ ಕಟ್ಟಡ ಕಾರ್ಮಿಕರ ಸಂಘಟನೆಯ ಸಭೆ ನಡೆಸಲಾಯಿತು

EDITORIAL OFFICE: NO. 19, BHARAT BHAVAN, NO. 35, 1ST FLOOR, OPP. BALAJI PLYWOODS, INFANTRY ROAD, SHIVAJINAGAR, BANGALORE - 01.

Email: cpimlkarnataka@gmail.com
Facebook & Twitter: @CPIMLKar
Printed and Published by Clifton D' Rozario for the State Committee, CPIML (Liberation)
No. 19, Bharat Bhavan, No. 35, First Floor, Opp. Balaji Plywoods, Infantry Road, Shivajinagar, Bangalore - 560 001.

Printed at: Spectrum Printss, #119, Jewellers Street, Tasker Town, Shivaji Nagar, Bengaluru, Karnataka - 560 001.